# Insurance Agents (Life) Question Bank - Kannada

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 1 | ಒಂದು ಜೀವವಿಮಾ ಪಾಲಿಸಿಯಲ್ಲಿ ಸೇರಿಸಲಾದ ನಿರ್ವಿವಾದಿತ ಕಲಂ ಅಡಿಯಲ್ಲಿ ಯಾರನ್ನು ರಕ್ಷಿಸಲಾಗಿದೆ? | ವಿಮಾಗಾರ | ವಿಮಾದಾರ | ವಿಮಾ ಏಜೆಂಟ್ | ವಿಮಾ ಬ್ರೋಕರ್ | 2 |
| 2 | _______ ಪೂರ್ಣಗೊಳಿಸಿದ ಪಾಲಿಸಿಯನ್ನು ವಿಮಾ ಕಾಯಿದೆ ಕಲಂ 45 (ನಿರ್ವಿವಾದತೆಯ ಕಲಂ) ಅಡಿಯಲ್ಲಿ ವಿಮಾಗಾರರು ಕ್ಲೈಮನ್ನು (ದಾವೆಯನ್ನು) ತಿರಸ್ಕರಿಸುವಿಕೆಯಿಂದ ವಿಮಾದಾರರನ್ನು ರಕ್ಷಿಸುತ್ತದೆ. | ಒಂದು ವರ್ಷ | ಎರಡು ವರ್ಷಗಳು | ಐದು ವರ್ಷಗಳು | ಏಳು ವರ್ಷಗಳು | 2 |
| 3 | ಆತ್ಮಹತ್ಯೆ ಕಲಂ ಪ್ರಕಾರ, ಪಾಲಿಸಿ ಜಾರಿಗೆ ಬಂದ 3 ವರ್ಷಗಳ ನಂತರ ಆತ್ಮಹತ್ಯೆಯ ಪರಿಣಾಮವಾಗಿ ವಿಮಾದಾರರು ಮರಣ ಹೊಂದಿದರೆ ಫಲಾನುಭವಿಗಳು ಏನನ್ನು ಕ್ಲೇಮ್‌ನ ರೂಪದಲ್ಲಿ ಪಡೆಯುತ್ತಾರೆ? | ಏನೂ ಇಲ್ಲ | ವಿಮೆದಾರ ಪಾವತಿಸುವ ಪ್ರೀಮಿಯಂ | ವಿಮೆದಾರ ಪಾವತಿಸಿದ ಪ್ರೀಮಿಯಂನ ದುಪ್ಪಟ್ಟು | ಪಾಲಿಸಿಯ ಪೂರ್ಣ ಮುಖಬೆಲೆಯ ಮೊತ್ತ | 4 |
| 4 | ಮೊದಲ ಪ್ರೀಮಿಯಂ ರಸೀದಿ ಏನನ್ನು ಸೂಚಿಸುತ್ತದೆ? | ಉಚಿತ ಪ್ರಾಯೋಗಿಕ (ಫ್ರೀ ಲುಕ್) ಅವಧಿ ಕೊನೆಗೊಂಡಿತು | ಪಾಲಿಸಿ ಒಪ್ಪಂದ ಪ್ರಾರಂಭವಾಗಿದೆಯೆಂದು ಇಲ್ಲಿ ಕಂಡುಬರುತ್ತದೆ | ಪಾಲಿಸಿಯನ್ನು ಈಗ ರದ್ದುಗೊಳಿಸಲಾಗದು | ಪಾಲಿಸಿಯು ನಿರ್ದಿಷ್ಟ ನಗದು ಮೌಲ್ಯವನ್ನು ಪಡೆದುಕೊಂಡಿದೆ | 2 |
| 5 | ವಿಮಾಗಾರರು ಮತ್ತು ವಿಮಾದಾರರ ನಡುವಿನ ಒಪ್ಪಂದದ ಪುರಾವೆಯಾಗಿರುವ ಒಂದು ದಾಖಲೆಯನ್ನು ಗುರುತಿಸಿ | ಪ್ರಸ್ತಾಪ ಪತ್ರ | ಕ್ಲೈಮ್ ಪತ್ರ | ನಾಮನಿರ್ದೇಶನ ಪತ್ರ | ಪಾಲಿಸಿ ದಾಖಲೆ (ಬಾಂಡ್) | 4 |
| 6 | ಪಾಲಿಸಿ ದಸ್ತಾವೇಜಿನಲ್ಲಿ ಕ್ಲಿಷ್ಟಕರವಾದ ಶಬ್ದಗಳನ್ನು ಬಳಸಿ ಅದರಿಂದ ತೊಂದರೆಗಳು ಎದುರಾದರೆ, ಅದನ್ನು ಹೇಗೆ ಪರಿಹರಿಸುತ್ತಾರೆ? | ವಿಮಾದಾರನ ಪರವಾಗಿ | ವಿಮಾಗಾರನ ಪರವಾಗಿ | ಪಾಲಿಸಿಯನ್ನು ರದ್ದುಗೊಳಿಸಲ್ಪಟ್ಟು ಕಟ್ಟಿದ ಪ್ರೀಮಿಯಂ ಬಡ್ಡಿಯೊಂದಿಗೆ ಪಾಲಿಸಿದಾರನಿಗೆ ಹಿಂದಿರುಗಿಸಲಾಗುತ್ತದೆ | ಪಾಲಿಸಿಯನ್ನು ರದ್ದುಗೊಳಿಸಲ್ಪಟ್ಟು ಕಟ್ಟಿದ ಪ್ರೀಮಿಯಂ ಬಡ್ಡಿಯಿಲ್ಲದೆ ಪಾಲಿಸಿದಾರನಿಗೆ ಹಿಂದಿರುಗಿಸಲಾಗುತ್ತದೆ. | 1 |
| 7 | ಪ್ರಾಯದ ಬಗ್ಗೆ ತಪ್ಪು ಹೇಳಿಕೆ ನೀಡಿದ್ದಾದಲ್ಲಿ, ಈ ಕೆಳಗಿನದರದಲ್ಲಿ ಯಾವುದು ಸರಿ?<br>I. ಕಡಿಮೆ ಪ್ರಾಯವೆಂದು ತೋರಿಸಿದ್ದಾದಲ್ಲಿ ಕಡಿಮೆ ವಿಮಾ ಮೊತ್ತಕ್ಕೆ ಬೇರೆ ಪಾಲಿಸಿ ನೀಡಲಾಗುವುದು.<br>II. ಹೆಚ್ಚು ಪ್ರಾಯವೆಂದು ತೋರಿಸಿದ್ದಾದಲ್ಲಿ ಹೆಚ್ಚುವರಿ ಪ್ರೀಮಿಯಂ | ಕೇವಲ I | II, ಮಾತ್ರ. | I ಮತ್ತು II | I ಅಲ್ಲಾ II ಅಲ್ಲಾ | 3 |
| 8 | ಕೆಳಗಿನವುಗಳಲ್ಲಿ ಯಾವುದು ಸರಿಯಾದ ಪಾಲಿಸಿ ದಸ್ತಾವೇಜಿನ ಅಂಗವಾಗಿಲ್ಲ? | ಪಾಲಿಸಿ ಶೆಡ್ಯೂಲ್ | ಸಾಮಾನ್ಯ ನಿಬಂಧನೆಗಳು | ನಿರ್ದಿಷ್ಟ ನಿಬಂಧನೆಗಳು | ಪಾಲಿಸಿಯ ಫೋರ್‌ಫೀಚರ್ ನಿಬಂಧನೆಗಳು | 4 |
| 9 | ಪಾಲಿಸಿಗಾರ ಮತ್ತು ಪಾಲಿಸಿದಾರರ ನಡುವಿನ ಒಪ್ಪಂದದ ದಾಖಲೆ ಯಾವುದು? | ಪಾಲಿಸಿ ಅನುಸೂಚಿ | ದಾವೆಗಳ ಅನುಸೂಚಿ | ನಾಮನಿರ್ದೇಶನದ ಅನುಸೂಚಿ | ಪಾಲಿಸಿ ಬಾಂಡ್ | 4 |
| 10 | ಪ್ರಮಾಣಿತ ವಿಮಾ ಪಾಲಿಸಿ ದಾಖಲೆಯಲ್ಲಿ ಪ್ರಮಾಣಿತ ನಿಬಂಧನೆಗೆ ಉದಾಹರಣೆ ಕೊಡಿ | ಗರ್ಭಧಾರಣೆಯ ಕಾರಣದಿಂದಾಗುವ ಮರಣ | ಆತ್ಮಹತ್ಯೆಯ ನಿಬಂಧನೆ | ಯಾವುದಾದರೂ ರೋಗದ ನಿಬಂಧನೆ | ಪಾಲಿಸಿದಾರನಿಗೆ ಹೆಚ್ಚಿನ ಪ್ರಯೋಜನ ನೀಡುವ ನಿಬಂಧನೆ | 2 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 11 | ಪ್ರಮಾಣಿತ ವಿಮಾ ಪಾಲಿಸಿ ದಾಖಲೆಯಲ್ಲಿ ನಿರ್ದಿಷ್ಟ ನಿಬಂಧನೆಗೆ ಉದಾಹರಣೆ ಕೊಡಿ | ಪ್ರೀಮಿಯಂ ಪಾವತಿ | ಪ್ರಾಯದ ತಪ್ಪು ದಾಖಲೆ | ದಾವೆಯ ನಿಬಂಧನೆ | ಪಾಲಿಸಿ ಬರೆಯುವ ಸಂದರ್ಭದಲ್ಲಿ ಯಾವುದೇ ಸ್ತ್ರೀ ಗರ್ಭಧಾರಣೆಯ ಸಂದರ್ಭದಲ್ಲಿ ಮರಣಗೊಂಡರೆ ಎಂಬ ನಿಬಂಧನೆ | 4 |
| 12 | ಪ್ರಮಾಣಿತ ವಿಮಾ ಪಾಲಿಸಿ ದಾಖಲಾತಿಯಲ್ಲಿ ಈ ಕೆಳಗಿನ ಯಾವ ಭಾಗ ಪ್ರಥಮ ಭಾಗವಾಗುತ್ತದೆ? | ಪಾಲಿಸಿ ಶೆಡ್ಯೂಲ್ | ಸಾಮಾನ್ಯ ನಿಬಂಧನೆಗಳು | ನಿರ್ದಿಷ್ಟ ನಿಬಂಧನೆಗಳು | ದಾವೆಗಳ ಸೂಚನೆಗಳು | 1 |
| 13 | ಸರಿಯಾದುದನ್ನು ಆಯ್ಕೆ ಮಾಡಿ | ವಿಮಾ ಪಾಲಿಸಿ ದಾಖಲೆ ಅರ್ಹ ವ್ಯಕ್ತಿಯಿಂದ ಸಹಿ ಹಾಕಲ್ಪಟ್ಟಿರಬೇಕು ಆದರೆ ಸ್ಟ್ಯಾಂಪ್ ಹಾಕಬೇಕಿಲ್ಲ | ವಿಮಾ ಪಾಲಿಸಿ ದಾಖಲೆಗೆ ಅರ್ಹ ವ್ಯಕ್ತಿಯ ಸಹಿಯೂ ಬೇಕು, ಜೊತೆಗೆ ಸ್ಟ್ಯಾಂಪ್ ಹಾಕಿರಬೇಕು | ವಿಮಾ ಪಾಲಿಸಿ ದಾಖಲೆಯಲ್ಲಿ ಸಹಿಯ ಅಗತ್ಯವಿಲ್ಲ ಆದರೆ ಸ್ಟ್ಯಾಂಪ್ ಹಾಕಬೇಕು | ಪಾಲಿಸಿ ದಾಖಲೆಗೆ ಸಹಿಯೂ ಬೇಕಾಗಿಲ್ಲ ಜೊತೆಗೆ ಸ್ಟ್ಯಾಂಪ್‌ನ ಅಗತ್ಯವೂ ಇಲ್ಲ | 2 |
| 14 | ವಿಮಾ ಪಾಲಿಸಿಯ ದಾಖಲೆಯ ಮೂಲ ಪ್ರತಿ ಕಳೆದು ಹೋದರೆ ಏನು ಪರಿಣಾಮವಾಗುತ್ತದೆ? | ವಿಮಾ ಕಂಪೆನಿಯು ಒಪ್ಪಂದದಲ್ಲಿ ಯಾವುದೇ ಬದಲಾವಣೆ ಮಾಡದೆ ನಕಲು ಪ್ರತಿಯನ್ನು ನೀಡುತ್ತದೆ. | ವಿಮಾ ಒಪ್ಪಂದವನ್ನು ಅಲ್ಲಿಗೇ ನಿಲ್ಲಿಸಲಾಗುತ್ತದೆ. | ವಿಮಾದಾರನ ಪ್ರಸ್ತುತ ಆರೋಗ್ಯದ ವಿವರ ಪಡಕೊಂಡು ಹೊಸ ನಿಬಂಧನೆಗಳೊಂದಿಗೆ ಮತ್ತೊಂದು ಪಾಲಿಸಿಯನ್ನು ನೀಡುತ್ತದೆ. | ವಿಮಾ ಕಂಪೆನಿಯು ಒಪ್ಪಂದದಲ್ಲಿ ಬದಲಾವಣೆ ಮಾಡದೆ ಹೊಸ ಪಾಲಿಸಿಯನ್ನು ನೀಡುತ್ತದೆ, ಆದರೆ ನ್ಯಾಯಾಲಯದಿಂದ ಪ್ರಮಾಣ ಪತ್ರ ತರಬೇಕು. | 1 |
| 15 | ಮೊದಲ ಪ್ರೀಮಿಯಂನ ನಂತರದ ಪ್ರೀಮಿಯಂ ಕಂಪೆನಿಗೆ ಸಲ್ಲಿಸಿದಾಗ ವಿಮಾ ಕಂಪೆನಿಯು ಈ ಕೆಳಗಿನ ಯಾವ ದಾಖಲಾತಿಯನ್ನು ಪಾಲಿಸಿದಾರನಿಗೆ ನೀಡುತ್ತದೆ? | ಪಾಲಿಸಿ ಊರ್ಜಿತಗೊಳಿಸಿದ ರಶೀದಿ | ಪಾಲಿಸಿಯನ್ನು ಪುನರುಜ್ಜೀವನ ಗೊಳಿಸಿದ ರಶೀದಿ | ಪಾಲಿಸಿಯನ್ನು ಪುನಶ್ಚೇತನಗೊಳಿಸಿದ ರಶೀದಿ | ರಿನ್ಯೂವಲ್ ಪಾಲಿಸಿ (ನವೀಕರಿಸಿದ) ರಶೀದಿ | 4 |
| 16 | ನಿಬಂಧನೆಗಳಿಗೆ ಅನುಗುಣವಾಗಿ ಒಂದು ಪಾಲಿಸಿ ನಿಶ್ಚಿತ ಶರಣಾಗತಿ (ಗ್ಯಾರಂಟೀಡ್ ಸರೆಂಡರ್) ಮೌಲ್ಯಗಳನ್ನು ಗಳಿಸುವ ಸಲುವಾಗಿ ಎಷ್ಟು ಕಾಲ ಪ್ರೀಮಿಯಂಗಳನ್ನು ಪಾವತಿಸಬೇಕು? | 2 ವರ್ಷ ಸತತವಾಗಿ | 4 ವರ್ಷ ಸತತವಾಗಿ | 3 ವರ್ಷ ಸತತವಾಗಿ | 5 ವರ್ಷ ಸತತವಾಗಿ | 3 |
| 17 | ಒಂದು ವಿಮಾ ಪಾಲಿಸಿಯಲ್ಲಿ ನಾಮನಿರ್ದೇಶನ, 1938ರ ವಿಮೆ ಕಾನೂನಿನ (ಇನ್ಶ್ಯುರೆನ್ಸ್ ಆಕ್ಟ್) ___________ ಅಡಿಯಲ್ಲಿ ಅವಕಾಶ ನೀಡಲಾಗಿದೆ. | ವಿಭಾಗ 10 | ವಿಭಾಗ 38 | ವಿಭಾಗ 39 | ವಿಭಾಗ 45 | 3 |
| 18 | ಪಾಲಿಸಿದಾರ ನಿಯುಕ್ತರನ್ನು (ಎಪೋಯಿಂಟಿ) ನೇಮಿಸುವ ಅಗತ್ಯವಿರುವ ಸಂದರ್ಭಗಳನ್ನು ಗುರುತಿಸಿ. | ವಿಮಾದಾರನು ಒಬ್ಬ ಅಪ್ರಾಪ್ತ | ನಾಮನಿರ್ದೇಶಿತ ಒಬ್ಬ ಅಪ್ರಾಪ್ತ | ಪಾಲಸಿದಾರನ ಮಾನಸಿಕ ಸ್ಥಿತಿ ಸರಿಯಾಗಿಲ್ಲ | ಪಾಲಿಸಿದಾರನಿಗೆ ಮದುವೆ ಆಗಿಲ್ಲ | 2 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 19 | ಗ್ರೇಸ್ ಅವಧಿಯ ಉದ್ದೇಶವನ್ನು ಸ್ಪಷ್ಟಪಡಿಸಿ | ಈ ಕಾಲಾವಧಿಯೊಳಗೆ ಪಾಲಿಸಿದಾರರಿಗೆ ಪಾಲಿಸಿಯು ಇಷ್ಟವಾಗದಿದ್ದಲ್ಲಿ ರದ್ದು ಮಾಡಬಹುದಾಗಿದೆ | ಇದು ಪಾಲಿಸಿದಾರರಿಗೆ ಅವರ ಪ್ರೀಮಿಯಂನ್ನು ಪಾವತಿಸಲು ಹೆಚ್ಚುವರಿ ಸಮಯವನ್ನು ಮಂಜೂರು ಮಾಡುತ್ತದೆ | ಇದು ಪಾಲಿಸಿದಾರರಿಗೆ ಯಾವುದೇ ಕುಂದುಕೊರತೆ ಇದ್ದಲ್ಲಿ ದೂರು ದಾಖಲಿಸಬಹುದಾದ ಒಂದು ಕಾಲಾವಕಾಶವನ್ನು ಒದಗಿಸುತ್ತದೆ | ಈ ಕಾಲಾವಕಾಶದ ನಂತರ ಪಾಲಿಸಿದಾರರಿಗೆ ಅವರ ಬಾಕಿ ಉಳಿದ ಪ್ರೀಮಿಯಂ ಪಾವತಿ ಮಾಡಲು ಇದು ಅವಕಾಶ ನೀಡುತ್ತದೆ | 2 |
| 20 | ನಾಮ ನಿರ್ದೇಶನವು ಸಂಬಂಧಿಸಿದಂತೆ ಯಾವುದನ್ನು ಹೊರತುಪಡಿಸಿ ಕೆಳಗಿನ ಎಲ್ಲ ಹೇಳಿಕೆಗಳು ಸರಿಯಾಗಿವೆ: | ಸಾಲಕ್ಕೆ ಪ್ರತಿಯಾಗಿ ಪಾಲಿಸಿಯನ್ನು ವಿಮೆಗಾರನಿಗೆ ನಿಯೋಜಿಸಿದ್ದಲ್ಲಿ ಪಾಲಿಸಿ ನಾಮನಿರ್ದೇಶನವನ್ನು ರದ್ದುಗೊಳಿಸಲಾಗಿರುವುದಿಲ್ಲ | ಪಾಲಿಸಿ ಖರೀದಿಯ ಸಮಯದಲ್ಲಿ ಅಥವಾ ತರುವಾಯ ನಾಮನಿರ್ದೇಶನ ಮಾಡಬಹುದು | ಪಾಲಿಸಿಯಲ್ಲಿ ಒಂದು ಅನಮೋದನೆಯನ್ನು ಮಾಡುವುದರಿಂದ ನಾಮನಿರ್ದೇಶನವನ್ನು ಬದಲಿಸಬಹುದಾಗಿದೆ | ಒಬ್ಬ ನಾಮ ನಿರ್ದೇಶಿತನು ಒಟ್ಟಾರೆ ಕ್ಲೈಮ್‌ನ ಮೇಲೆ ಸಂಪೂರ್ಣ ಹಕ್ಕು ಹೊಂದಿರುತ್ತಾನೆ | 4 |
| 21 | ಪಾಲಿಸಿ ಯಾವ ಸಂದರ್ಭದಲ್ಲಿ ಅನೂರ್ಜಿತಗೊಳ್ಳುತ್ತದೆ? | ಪಾಲಿಸಿ ಪ್ರೀಮಿಯಂ ನಿಗದಿತ ಸಮಯಕ್ಕೆ ಕಟ್ಟದಿದ್ದಾಗ | ಪ್ರೀಮಿಯಂಗಳನ್ನು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಕಟ್ಟದಿದ್ದಾಗ | ಗ್ರೇಸ ಅವಧಿ ಕಳೆದು ಹೋದರೂ ಪ್ರೀಮಿಯಂ ಕಟ್ಟದಿದ್ದ ಸಂದರ್ಭದಲ್ಲಿ | ಪಾಲಿಸಿಯನ್ನು ಸರೆಂಡರ್ ಮಾಡಿದಾಗ (ಶರಣಾಗತಿ) | 3 |
| 22 | ಪಾಲಿಸಿಯನ್ನು ಊರ್ಜಿತಗೊಳಿಸುವಾಗ ಈ ಕೆಳಗಿನ ಯಾವ ಸಂದರ್ಭದಲ್ಲಿ, ವಿಮಾದಾರನ ಅರ್ಹತೆಯನ್ನು ತೋರಿಸಿ ಕೊಡಬೇಕಾಗುತ್ತದೆ? | ಪಾಲಿಸಿ ಅನೂರ್ಜಿತಗೊಂಡು ಒಂದು ವಾರವಾದಾಗ | ಪಾಲಿಸಿ ಅನೂರ್ಜಿತಗೊಂಡು ಒಂದು ವರ್ಷಕ್ಕಿಂತ ಮೇಲ್ಪಟ್ಟಾಗ | ಪಾಲಿಸಿ ಒಂದು ವರ್ಷದ ತನಕ ಚಾಲ್ತಿಯಲ್ಲಿದ್ದಾಗ | ಪಾಲಿಸಿಯ ಮೇಲೆ ಸಾಲ ಕೇಳಿದಾಗ | 2 |
| 23 | ಪಾಲಿಸಿ ಸಾಲದ ಬಗ್ಗೆ ಈ ಕೆಳಗಿನ ಯಾವ ವಾಕ್ಯ ಅತೀ ಹೆಚ್ಚು ಸಮಂಜಸವಾಗಿದೆ? | ಯಾವ ಮೊತ್ತದ ಸಾಲವನ್ನೂ ಪಡೆಯಬಹುದು | ಸಾಲದ ನಿರ್ಬಂಧಗಳನ್ನು ಪಾಲಿಸಿದಾರನೇ ನಿಶ್ಚಯಿಸುತ್ತಾನೆ | ಸಾಲದ ಮರುಪಾವತಿ ಮಾಡಲು ಯಾವುದೇ ನಿಬಂಧನೆಗಳಿಲ್ಲ | ಸಾಲ ಮಾಡಲು ಇತರ ಆಧಾರಗಳು ಬೇಕಾಗಿಲ್ಲ | 3 |
| 24 | ಗ್ರೇಸ್ ಅವಧಿಯ ಸಲುವಾಗಿ ಈ ಕೆಳಗಿನ ಯಾವ ವಾಕ್ಯ ಸರಿಯಾಗಿದೆ? | ಗ್ರೇಸ್ ಅವಧಿ ಒಂದು ತಿಂಗಳು ಅಥವಾ 30 ದಿವಸಗಳು | ಗ್ರೇಸ್ ಅವಧಿ ಮೂರು ತಿಂಗಳಾಗಿರುತ್ತದೆ | ಗ್ರೇಸ್ ಅವಧಿ ಒಂದು ವಾರವಾಗಿರುತ್ತದೆ | ಗ್ರೇಸ್ ಅವಧಿ 15 ದಿವಸಗಳಾಗಿರುತ್ತದೆ | 1 |
| 25 | ಕೆಳಗಿನವುಗಳಲ್ಲಿ ಯಾವ ಬದಲಾವಣೆಯನ್ನು ವಿಮಾ ಕಂಪೆನಿಯು ಒಪ್ಪಿಕೊಳ್ಳುತ್ತದೆ? | ಒಂದು ಪಾಲಿಸಿಯನ್ನು ಎರಡು ಅಥವಾ ಹೆಚ್ಚು ಪಾಲಿಸಿಗಳಾಗಿ ವಿಂಗಡಿಸುವುದು | ಪ್ರೀಮಿಯಂ ಕಟ್ಟುವ ಅವಧಿಯನ್ನು ವಿಸ್ತರಿಸುವುದು | ಲಾಭಸಹಿತ ಪಾಲಿಸಿಯಿಂದ ಲಾಭ ರಹಿತ ಪಾಲಿಸಿಗೆ ಪರಿವರ್ತಿಸುವುದು | ವಿಮಾ ಮೊತ್ತವನ್ನು ಹೆಚ್ಚಿಸುವುದು | 1 |
| 26 | ಸರೆಂಡರ್ ಅಥವಾ ಶರಣಾಗತಿಯನ್ನು ವಿವರಿಸಿ | ಒಂದು ಪಾಲಿಸಿಯಲ್ಲಿ ಅತೀ ಹೆಚ್ಚು ಸಿಗುವ ಹಣ | ಒಂದು ಪಾಲಿಸಿಯಲ್ಲಿ 3 ವರ್ಷಗಳ ಕಾಲ ಪ್ರೀಮಿಯಂ ಕಟ್ಟಿದ ನಂತರ ಸಿಗುವ ಪಾಲಿಸಿಯ ನಗದು ಮೌಲ್ಯ | ಒಂದು ಪಾಲಿಸಿಯಲ್ಲಿ ಸಿಗುವ ಅತೀ ಕಡಿಮೆ ಮೌಲ್ಯ | ಪಾಲಿಸಿಯ ಯಾವುದೇ ಅವಧಿಯಲ್ಲಿ ಸಿಗುವ ಮೌಲ್ಯ | 2 |
| 27 | ಒಂದು ಪಾಲಿಸಿಯಲ್ಲಿ ಎಷ್ಟು ಜನರನ್ನು ನಾಮನಿರ್ದೇಶಿಸಬಹುದು? ಕೆಳಗಿನ ಆಯ್ಕೆಯಲ್ಲಿ ಯಾವುದನ್ನು ಆರಿಸುವಿರಿ? | ಒಂದು ಮಾತ್ರ | ಎರಡು ಮಾತ್ರ | ಮೂರು ಮಾತ್ರ | ಒಂದು ಅಥವಾ ಅದಕ್ಕಿಂತ ಹೆಚ್ಚು | 4 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 28 | ನಾಮನಿರ್ದೇಶನದ ಉದ್ದೇಶವನ್ನು ವಿವರಿಸಿ | ಪಾಲಿಸಿಯ ಹಕ್ಕನ್ನು ವರ್ಗಾಯಿಸಲು | ಪಾಲಿಸಿದಾರ ಮರಣಗೊಂಡಾಗ ಪಾಲಿಸಿ ಹಣವನ್ನು ಪಡೆಯಲು ಅನುಕೂಲವಾಗುವಂತೆ ಒಬ್ಬ ವ್ಯಕ್ತಿಯನ್ನು ನೇಮಿಸುವುದು | ಪಾಲಿಸಿಯನ್ನು ಶರಣಾಗತಿಗೊಳಿಸಲು | ಒಂದು ಆಸ್ತಿಯನ್ನು ರೂಪಿಸಲು | 2 |
| 29 | ಪರಭಾರೆಯ (ಎಸೈನ್‌ಮೆಂಟ್) ಉದ್ದೇಶವನ್ನು ವಿವರಿಸಿ | ಪಾಲಿಸಿಯ ಹಕ್ಕನ್ನು ವರ್ಗಾಯಿಸಲು | ಪಾಲಿಸಿದಾರ ಮರಣಗೊಂಡಾಗ ಪಾಲಿಸಿ ಹಣವನ್ನು ಪಡೆಯಲು ಅನುಕೂಲವಾಗುವಂತೆ ಒಬ್ಬ ವ್ಯಕ್ತಿಯನ್ನು ನೇಮಿಸುವುದು | ಪಾಲಿಸಿಯನ್ನು ಶರಣಾಗತಿಗೊಳಿಸಲು | ಒಂದು ಆಸ್ತಿಯನ್ನು ರೂಪಿಸಲು | 1 |
| 30 | ಒಂದು ಪಾಲಿಸಿಯನ್ನು ಸರಳ ವಿಧಾನದಲ್ಲಿ ಊರ್ಜಿತಗೊಳಿಸುವ ಬಗ್ಗೆ ತಿಳಿಸಿ. | ಪಾಲಿಸಿಯ ಪ್ರಾರಂಭದ ದಿನಾಂಕವನ್ನು ಎರಡು ವರ್ಷಕ್ಕಿಂತ ಕಡಿಮೆ ಎಂಬಂತೆ ಮುಂದಕ್ಕೆ ಹಾಕಿ ಹೊಸ ಪಾಲಿಸಿಯನ್ನು ನೀಡುವುದು | ಬಾಕಿಯಾದ ಪ್ರೀಮಿಯಂ ಮತ್ತು ಅದಕ್ಕೆ ಬಡ್ಡಿ ಕೊಡುವುದು | ಪಾಲಿಸಿಯನ್ನು ಊರ್ಜಿತಗೊಳಿಸಲು ಬೇಕಾದ ಹಣವನ್ನು ಪಾಲಿಸಿಯಿಂದ ಸಾಲದ ರೂಪದಲ್ಲಿ ಪಡೆಯುವುದು | ಪ್ರೀಮಿಯಂ ಹಣವನ್ನು ಕಂತಿನಲ್ಲಿ ನೀಡುವುದು | 2 |
| 31 | ಕೆಳಗಿನ ಯಾವ ದಸ್ತಾವೇಜು ಪ್ರಮಾಣಿತ ವಯಸ್ಸಿನ ಪುರಾವೆ ದಾಖಲೆಯೆಂದು ಸಮ್ಮತವಾಗಿಲ್ಲ? | ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ | ಪಾಸ್‌ಪೋರ್ಟ್ | ಜಾತಕ | ಉದ್ಯೋಗದಾತರ ಪ್ರಮಾಣಪತ್ರ | 3 |
| 32 | ಕೆಳಗಿನ ಯಾವ ಹೇಳಿಕೆಯು 'ವಿರೋಧಿ ಆಯ್ಕೆ' (ಆಂಟಿ ಸೆಲೆಕ್ಷನ್) ಸಂಬಂಧಿಸಿದಂತೆ ಸರಿಯಾಗಿದೆ? | ವಿರೋಧಿ ಆಯ್ಕೆ (ಆಂಟಿ ಸೆಲೆಕ್ಷನ್) ಎನ್ನುವುದು ಅನೈತಿಕ ಪ್ರತಿನಿಧಿಗಳನ್ನು ಆರಿಸುವುದನ್ನು ತಪ್ಪಿಸಲು ವಿಮಾ ಸಂಸ್ಥೆಯಿಂದ ಬಳಸಲಾಗುವ ಪ್ರಕ್ರಿಯೆಯಾಗಿದೆ | ವಿರೋಧಿ ಆಯ್ಕೆ (ಆಂಟಿ ಸೆಲೆಕ್ಷನ್) ಎನ್ನುವುದು ನಷ್ಟವು ಉಂಟಾಗುವ ಸಾಧ್ಯತೆ ಇದೆ ಎಂಬ ಗುಮಾನಿ ಹೊಂದಿರುವ ಅಥವಾ ತಿಳಿದಿರುವವರು, ವಿಮೆಯನ್ನು ಪಡೆಯುವ ಪ್ರಕ್ರಿಯೆಯ ಮೂಲಕ ಲಾಭವನ್ನು ಹೊಂದುವ ಜನರ ಪ್ರವೃತ್ತಿಯಾಗಿದೆ | ವಿರೋಧಿ ಆಯ್ಕೆ (ಆಂಟಿ ಸೆಲೆಕ್ಷನ್) ಎನ್ನುವುದು ವಿಮಾ ಸಂಸ್ಥೆಯಿಂದ ಬಳಸಲಾಗುವ ಪ್ರಕ್ರಿಯೆಯಾಗಿದ್ದು ಇದರ ಮೂಲಕ ಭವಿಷ್ಯದ ಪಾಲಿಸಿದಾರರಿಗೆ ಸೂಕ್ತವಲ್ಲದ ವಿಮಾ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಗಿಲ್ಲ ಎನ್ನುವುದನ್ನು ಖಾತ್ರಿ ಪಡಿಸಿಕೊಳ್ಳುತ್ತದೆ | ವಿರೋಧಿ ಆಯ್ಕೆ (ಆಂಟಿ ಸೆಲೆಕ್ಷನ್) ಎನ್ನುವುದು ವಿಮಾ ಸಂಸ್ಥೆಯಿಂದ ಬಳಸಲಾಗುವ ಪ್ರಕ್ರಿಯೆಯಾಗಿದ್ದು ಇದರ ಮೂಲಕ ಪಾಲಿಸಿದಾರರಿಂದ ಸಂಗ್ರಹಿಸಲಾದ ಪ್ರೀಮಿಯಮ್‌ಗಳನ್ನು ಸೂಕ್ತವಲ್ಲದ ಹೂಡಿಕೆ ಉತ್ಪನ್ನಗಳಲ್ಲಿ ಹೂಡಿಕೆ ಮಾಡಲಾಗಿಲ್ಲ ಎನ್ನುವುದನ್ನು ಖಾತ್ರಿ ಪಡಿಸಿಕೊಳ್ಳುತ್ತದೆ | 2 |
| 33 | ಕೆಳಗಿನ ವ್ಯಕ್ತಿಗಳ ಪೈಕಿ ಯಾರನ್ನು ವಿಮಾ ಕಂಪೆನಿಗಳಿಂದ ಹೆಚ್ಚು ಅಪಾಯದವರೆಂದು ಪರಿಗಣಿಸಲಾಗುತ್ತದೆ? ಸೂಕ್ತ ಆಯ್ಕೆ ಮಾಡಿ. | 'ಪಾನ್ ಮಸಾಲ'ವನ್ನು ಯಾವಾಗಲೂ ತಿನ್ನುವ ವ್ಯಕ್ತಿಗಳು | ಮದ್ಯಪಾನವನ್ನು ತ್ಯಜಿಸಿದವನು | ಮತ್ತು ಬರಿಸುವ ವಸ್ತು ಮತ್ತು ಇತರೆ ಉತ್ತೇಜಕಗಳನ್ನು ಸೇವಿಸುವ ವ್ಯಕ್ತಿಗಳು | ಯಾವಾಗಲೂ ಮಾಂಸಾಹಾರವನ್ನು ಸೇವಿಸುವ ವ್ಯಕ್ತಿಗಳು | 3 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 34 | ಕೆಳಗಿನವರಲ್ಲಿ ಯಾರು ಆತನ/ಆಕೆಯ ವೃತ್ತಿಯಲ್ಲಿರುವ ಆರೋಗ್ಯ ಅವಘಡಕ್ಕೆ ಒಡ್ಡಲಾಗಿರುವ ಸಾಧ್ಯತೆಯಿದೆ? | ಯೋಗ ತರಬೇತುದಾರ | ಚಲನಚಿತ್ರ ಸಾಹಸ ಕಲಾವಿದ | ನೈಟ್‌ಕ್ಲಬ್‌ನ ನೃತ್ಯಗಾರ್ತಿ | ಗಣಿಗಾರಿಕೆ ಧೂಳಿಗೆ ಒಡ್ಡಲ್ಪಟ್ಟ ವ್ಯಕ್ತಿ | 4 |
| 35 | ಕೆಳಗಿನವರಲ್ಲಿ ಯಾರು ಆತನ/ಆಕೆಯ ವೃತ್ತಿಯಲ್ಲಿರುವ ಆಕಸ್ಮಿಕ ಅವಘಡಕ್ಕೆ ಒಡ್ಡಲಾಗಿರುವ ಸಾಧ್ಯತೆಯಿದೆ. | ವೈದ್ಯಕೀಯ ಉದ್ಯೋಗಿ | ಪ್ರವಾಸಿ ಮಾರ್ಗದರ್ಶಿ | ಕಟ್ಟಡ ಕೆಡವುವ ಉದ್ಯೋಗಿ | ನಿಯಮಿತವಾಗಿ ಕೆಲಸದ ಕ್ಷೇತ್ರದಲ್ಲಿರುವ ಮಾರ್ಕೆಟಿಂಗ್ ಕಾರ್ಯನಿರ್ವಾಹಕ | 3 |
| 36 | __________ ಅಂದರೆ ಜೀವವಿಮೆ ಮಾಡಿಸಿದಾತ ಯಾವುದಾದರು ನಿರ್ದಿಷ್ಟ ಕಾರಣಗಳಿಂದ ಮರಣಗೊಂಡಾಗ ಆ ಅವಧಿಯಲ್ಲಿ ಕಡಿಮೆ ಮರಣದ ಲಾಭವನ್ನು ನೀಡುವುದಾಗಿದೆ | ಮರಣ ಸಂಖ್ಯೆ | ಲೀನ್ | ವಿರೋಧಿ ಆಯ್ಕೆ | ಸಾಲ | 2 |
| 37 | ಸಂಖ್ಯೆಗಳನ್ನು ಬಳಸಿ ಮಾಡುವ ವಿಮಾ ಪತ್ರಲೇಖನದಲ್ಲಿ, ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ? | ಈ ವಿಧಾನದಲ್ಲಿ ವಿಮಾ ಪತ್ರಲೇಖಕರು ಎಲ್ಲಾ ನಕಾರ ಅಥವಾ ಕೆಟ್ಟ ವಿಷಯಗಳಿಗೆ ಪೊಸಿಟಿವ್ (+)(ಧನಾತ್ಮಕ) ಮಾರ್ಕು ನೀಡುತ್ತಾರೆ | ಈ ವಿಧಾನದಲ್ಲಿ ವಿಮಾ ಪತ್ರಲೇಖಕರು ಎಲ್ಲಾ ಒಳ್ಳೆಯ ವಿಷಯಗಳಿಗೆ ಪೊಸಿಟಿವ್ (+)(ಧನಾತ್ಮಕ) ಮಾರ್ಕು ನೀಡುತ್ತಾರೆ | ಈ ವಿಧಾನದಲ್ಲಿ ವಿಮಾ ಪತ್ರಲೇಖಕರು ಒಟ್ಟ ಪಡೆದ ಮಾರ್ಕುಗಳನ್ನಾಧರಿಸಿ ಅಪಾಯ ಎಷ್ಟೆಂದು (ಇಒಖ) ಅಳೆಯುತ್ತಾರೆ | ಈ ವಿಧಾನದಲ್ಲಿ ವಿಮಾ ಪತ್ರಲೇಖಕರು ಎಲ್ಲಾ ನಕಾರ ಅಥವಾ ಕೆಟ್ಟ ವಿಷಯಗಳಿಗೆ ಇಒಖ ಬಹಳ ಹೆಚ್ಚಾದರೆ ವಿಮೆಯನ್ನು ನಿರಾಕರಿಸುತ್ತಾರೆ | 2 |
| 38 | ನ್ಯಾಯ ನೀಡುವ ವಿಮಾ ಪತ್ರಲೇಖನದಲ್ಲಿ, ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ? | ಈ ವಿಧಾನದಲ್ಲಿ ಒಟ್ಟಾರೆ ನ್ಯಾಯ ಏನೆಂದು ತಿಳಿಯುವ ವಿಧಾನವಾಗಿದೆ | ಈ ವಿಧಾನವನ್ನು ಹೆಚ್ಚಾಗಿ ಬಹಳ ಕ್ಲಿಷ್ಟಕರವಾದ ಸಂದರ್ಭದಲ್ಲಿ ಬಳಸಲಾಗುತ್ತೆ | ಈ ವಿಧಾನದಲ್ಲಿ ವಿಮಾ ಕಂಪೆನಿಯು ಉತ್ತಮ ವೈದ್ಯರ ಸಲಹೆ ಪಡೆಯಬಹುದು | ಈ ವಿಧಾನದಲ್ಲಿ ವಿಮಾ ಪತ್ರಲೇಖಕರು ಒಳ್ಳೆಯ ಅಥವಾ ಕೆಟ್ಟ ವಿಚಾರಗಳಿಗೆ ಮಾರ್ಕು ನೀಡುವ ವಿಧಾನವಿದೆ | 4 |
| 39 | ಶ್ರೀ ವಿಮಲ್ ಒಬ್ಬ 32 ವರ್ಷ ಪ್ರಾಯದ ಆರೋಗ್ಯವಂತ, ಧೂಮಪಾನ ಮಾಡದ ಸುಸಂಸ್ಕೃತ ವ್ಯಕ್ತಿ. ಆತ ABC ಲಿಮಿಟೆಡ್ ವಿಮಾ ಕಂಪೆನಿಯಿಂದ ವಿಮೆಗಾಗಿ ಅರ್ಜಿ ಸಲ್ಲಿಸುತ್ತಾನೆ. ಅಪಾಯವನ್ನು ಸ್ವೀಕರಿಸುವ ನಿಟ್ಟಿನಲ್ಲಿ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿದೆ? | ಅಪಾಯವನ್ನು ಸಾಧಾರಣ ದರದಲ್ಲಿ ಸ್ವೀಕರಿಸಲಾಗುತ್ತದೆ | ಅಪಾಯವನ್ನು ಪ್ರಕಟಿಸಿದ ದರಕ್ಕಿಂತ ಹೆಚ್ಚಿನ ದರದಲ್ಲಿ ಸ್ವೀಕರಿಸಲಾಗುತ್ತೆ | ಅಪಾಯವನ್ನು ವಿಮಾ ಮೊತ್ತದ ಮೇಲೆ ಹೇರಿಕೆಯ ಷರತ್ತು (ಲೀನ್) ಹಾಕಿ ಸ್ವೀಕರಿಸಲಾಗುತ್ತದೆ | ಅಪಾಯವನ್ನು ಏನಾದರೊಂದು ತಡೆಯೊಡ್ಡಿ ಸ್ವೀಕರಿಸಲಾಗುತ್ತದೆ | 1 |
| 40 | ಶ್ರೀ ಬ್ರಿಜೇಶ್ ಎಂಬಾತ 40 ವರ್ಷ ಪ್ರಾಯದ ವ್ಯಕ್ತಿ. ಆತನನ್ನು ವಿಮಾ ಕಂಪೆನಿಯು ಕಡಿಮೆ ಆರೋಗ್ಯವಂತ ಎಂದು ಪರಿಗಣಿಸುತ್ತಾರೆ. ವಿಮಾ ಕಂಪೆನಿಯು ಅಪಾಯವನ್ನು ಸ್ವೀಕರಿಸುವ ಸಂದರ್ಭದಲ್ಲಿ ಈ ಕೆಳಗಿನ ಯಾವ ಹೇಳಿಕೆ ಸರಿ? | ಅಪಾಯವನ್ನು ಸಾಧಾರಣ ದರದಲ್ಲಿ ಸ್ವೀಕರಿಸಲಾಗುತ್ತದೆ | ಅಪಾಯವನ್ನು ಕಡಿಮೆ ದರದಲ್ಲಿ ಸ್ವೀಕರಿಸಬಹುದು | ಅಪಾಯವನ್ನು ಪ್ರಕಟಿಸಿದ ದರಕ್ಕಿಂತ ಹೆಚ್ಚಿನ ದರದಲ್ಲಿ ಸ್ವೀಕರಿಸುತ್ತದೆ | ಅಪಾಯವನ್ನು ತಿರಸ್ಕರಿಸಲಾಗುತ್ತೆ | 3 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 41 | ಅಪಾಯ ವರ್ಗೀಕರಣ ಎಂದರೆ ಈ ಕೆಳಗಿನವುಗಳಲ್ಲಿ ಯಾವುದು ಸರಿ? | ಪ್ರತೀ ವ್ಯಕ್ತಿಯನ್ನು ಅಪಾಯಕ್ಕನುಗುಣವಾಗಿ, ಅವರವರು ಯಾವ ಯಾವ ಅಪಾಯವನ್ನು ಎದುರಿಸುತ್ತಿದ್ದಾರೆ ಎಂದು ವರ್ಗೀಕರಿಸುವ ವಿಧಾನ | ಜನರು ಅವರ ಅಪಾಯದ ಮಟ್ಟವನ್ನು ಪರಿಗಣಿಸಿ ಅವರಿಗೆ ಅತೀ ಹೆಚ್ಚು ನಷ್ಟವಾಗುವುದಿದ್ದರೆ, ವಿಮೆ ಮಾಡಿಸಲು ಆತುರರಾಗುವುದು | ಪ್ರಸ್ತಾವನಾ ಪತ್ರವನ್ನು ಪರಿಶೀಲಿಸಿ ಪ್ರತಿಯೊಬ್ಬ ವ್ಯಕ್ತಿಯ ಅಪಾಯದ ಮಟ್ಟದ ಆಧಾರದಲ್ಲಿ ಪಾಲಿಸಿ ನೀಡಬೇಕೇ ಬೇಡವೇ ಎಂದು ನಿರ್ಧರಿಸುವುದು | ಪ್ರಸ್ತಾವನೆಯನ್ನು ನೋಡಿ ಒಂದೇ ರೀತಿಯ ಅಪಾಯದವರಿಗೆ ಒಂದೇ ರೀತಿಯ ಪ್ರೀಮಿಯಂ ವಿಧಿಸುವುದು | 1 |
| 42 | ________ ಅಂದರೆ, ಪ್ರಸ್ತಾಪದಾರರು ಒಂದೇ ಮಟ್ಟದ ಅಪಾಯದಲ್ಲಿದ್ದರೆ ಅವರನ್ನು ಪ್ರೀಮಿಯಂನ ಒಂದೇ ಗುಂಪಿನಲ್ಲಿರಿಸುವುದು | ಅಪಾಯದ ಆಯ್ಕೆ | ವಿರುದ್ಧ ಆಯ್ಕೆ | ನೈತಿಕ ಅವಘಡ | ಸಮಾನತೆ | 4 |
| 43 | ಈ ಹೇಳಿಕೆಗಳಲ್ಲಿ ಯಾವುದು ಸರಿ? ಕೆಳಮಟ್ಟದ ಜೀವದ ಬಗ್ಗೆ ಅಪಾಯವನ್ನು ವಿಂಗಡಿಸುವ ಸಂದರ್ಭದಲ್ಲಿ ಅತೀ ಸೂಕ್ತವಾದ ಹೇಳಿಕೆಯನ್ನು ಆರಿಸಿ | ಕೆಳಮಟ್ಟದ ಜೀವಗಳ ಅಪಾಯದ ಮಟ್ಟ ಎಂದರೆ, ಅವರ ಮರಣದ ಸಂಖ್ಯೆ ಸಾಧಾರಣ ವ್ಯಕ್ತಿಗಳ ಮರಣ ಸಂಖ್ಯೆಯಂತೆ ಇರುತ್ತದೆ | ಕೆಳಮಟ್ಟದ ಜೀವಗಳ ಸಾವಿನ ಪ್ರಮಾಣ ಸಾಮಾನ್ಯ ಆರೋಗ್ಯವಂತರ ಮರಣದ ಸಂಖ್ಯೆಗಿಂತ ತುಂಬಾ ಕಡಿಮೆಯಾಗಿರುತ್ತದೆ | ಕೆಳಮಟ್ಟದ ಜೀವಗಳ ಸಾವಿನ ಪ್ರಮಾಣ ಸಾಮಾನ್ಯ ಆರೋಗ್ಯವಂತರ ಮರಣದ ಸಂಖ್ಯೆಗಿಂತ ತುಂಬಾ ಹೆಚ್ಚಾಗಿರುತ್ತದೆ | ಕೆಳಮಟ್ಟದ ಜೀವಗಳ ಸಾವಿನ ಪ್ರಮಾಣ ಸಾಮಾನ್ಯ ಆರೋಗ್ಯವಂತರ ಮರಣದ ಸಂಖ್ಯೆಗಿಂತ ತುಂಬಾ ಹೆಚ್ಚಾದುದರಿಂದ ಕೈಗೆಟುವ ದರದಲ್ಲಿ ವಿಮೆಯನ್ನು ನೀಡಲಾಗುವುದಿಲ್ಲ | 3 |
| 44 | ಅಪಾಯದ ವಿಂಗಡಣೆಯ ವಿಚಾರದಲ್ಲಿ ತಿರಸ್ಕರಿಸಲ್ಪಟ್ಟ ಜೀವದ ಬಗ್ಗೆ ಯಾವ ಹೇಳಿಕೆ ಸರಿಯಾಗಿದೆ? | ತಿರಸ್ಕರಿಸಲ್ಪಟ್ಟ ಜೀವಗಳಲ್ಲಿ, ನಿರೀಕ್ಷಿತ ಮರಣದ ಸಂಖ್ಯೆ ಮತ್ತು ಆರೋಗ್ಯವಂತರ ಮರಣದ ಸಂಖ್ಯೆಗೆ ಸರಿಯಾಗಿದೆ | ತಿರಸ್ಕರಿಸಲ್ಪಟ್ಟ ಜೀವಗಳ ಮರಣದ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ ಎಂದರೆ ಅವರಿಗೆ ವಿಮೆಯನ್ನು ನಿರಾಕರಿಸಲಾಗುತ್ತೆ | ತಿರಸ್ಕರಿಸಲ್ಪಟ್ಟ ಜೀವಗಳ ಮರಣದ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ ಆದರೂ ಅವರಿಗೆ ವಿಮೆ ನೀಡಬಹುದು | ತಿರಸ್ಕರಿಸಲ್ಪಟ್ಟ ಜೀವಗಳ ಮರಣದ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ ಎಂದರೆ ಅವರಿಗೆ ಕಡಿಮೆ ಪ್ರೀಮಿಯಂ ದರ ಹಾಕಲಾಗುತ್ತೆ | 2 |
| 45 | ಒಂದು ವಿಮಾ ಕಂಪೆನಿಯು ವಿಮಾ ಮೊತ್ತದ ಮೇಲೆ ಹೇರಿಕೆಯ ಷರತ್ತು (ಲೀನ್) ಹಾಕಿ ಸ್ವೀಕರಿಸಿದರೆ ಅದು ಏನನ್ನು ಸೂಚಿಸುತ್ತದೆ? | ಲೀನ್ ಪ್ರಕಾರ, ವಿಮಾಗಾರ ಮೊದಲೇ ತಿಳಿಸಿದ ಕಾಯಿಲೆಯಿಂದ ತಿಳಿಸಿದ ಅವಧಿಯೊಳಗೆ ಮರಣ ಪಟ್ಟಾಗ ಕಡಿಮೆ ವಿಮಾ ಮೊತ್ತ ನೀಡಲಾಗುವುದು | ಲೀನ್ ಅಂದರೆ ವಿಮಾ ಕಂಪೆನಿ ಕಡಿಮೆ ಅವಧಿಗೆ ಅಪಾಯವನ್ನು ಸ್ವೀಕರಿಸಿದೆ | ಲೀನ್ ಅಂದರೆ, ವಿಮಾ ಕಂಪೆನಿಯು ಕಡಿಮೆ ಪ್ರೀಮಿಯಂ ದರದಲ್ಲಿ ಅಪಾಯವನ್ನು ಸ್ವೀಕರಿಸುತ್ತೆ | ಲೀನ್ ಅಂದರೆ, ವಿಮಾ ಕಂಪೆನಿಯು ಪ್ರಸ್ತಾವನಾ ಪತ್ರವನ್ನು ನಿರ್ಧರಿತ ಸಮಯದ ತನಕ ಮುಂದೂಡುತ್ತೆ | 1 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 46 | ವಿಮಾಗಾರರು ವಿಮಾ ಯೋಜನೆಯ ಅವಧಿಯ ಅಂತ್ಯದಲ್ಲಿ ವಿಮಾದಾರರಿಗೆ ಒಂದು ನಿರ್ದಿಷ್ಟಪಡಿಸಿದ ಮೊತ್ತವನ್ನು ಪಾವತಿಸುವುದರ ಕುರಿತು ಭರವಸೆ ನೀಡಿದರೆ, ಮತ್ತು  ಅವಧಿ ಜೀವಂತವಾಗಿದ್ದರೆ, ಆಗ ಕ್ಲೇಮ್ (ದಾವೆ) _______ ಎಂದು ಕರೆಯಲ್ಪಡುತ್ತದೆ.ವಿಮಾದಾರರು ಯೋಜನೆಯ ಸಂಪೂರ್ಣ | ಬದುಕುಳಿದಾಗಿನ ಪ್ರಯೋಜನಗಳ ಪಾವತಿ | ಪಾಲಿಸಿಯ ಸರೆಂಡರ್ (ಶರಣಾಗತಿ) | ಮರಣಪರಿಹಾರದ ಕ್ಲೈಮ್ (ದಾವೆ) | ಅವಧಿ ಪೂರ್ಣಿತ ದಾವೆ (ಮೆಚ್ಯುರಿಟಿ ಕ್ಲೈಮ್) | 4 |
| 47 | ವಿಮಾ ಕಂಪೆನಿಯು ಪಾಲಿಸಿ ಅವಧಿಯಲ್ಲಿ ನಿರ್ದಿಷ್ಟ ಮಧ್ಯಂತರಗಳಲ್ಲಿ ವಿಮಾದಾರರಿಗೆ ನಿಯತಕಾಲಿಕ ಪಾವತಿಗಳನ್ನು ಮಾಡುತ್ತಿದ್ದರೆ, ಈ ಪಾವತಿಗಳು _______ ಪ್ರಕಾರ ಮಾಡಲಾಗುತ್ತವೆ. | ಬದುಕುಳಿದಾಗಿನ ಪ್ರಯೋಜನಗಳ ಪಾವತಿ (ಸರ್ವೈವಲ್ ಬೆನಿಫಿಟ್) | ಸರೆಂಡರ್ ಮೌಲ್ಯ | ರೈಡರ್ ಪ್ರಯೋಜನಗಳು | ಷರತ್ತುಬದ್ಧ ನಿಯೋಜನೆ | 1 |
| 48 | ಜೀವವಿಮಾ ಕಂಪೆನಿಯು ಪಾಲಿಸಿ ಅವಧಿಯಲ್ಲಿ ವಿಮಾದಾರರು ಆಸ್ಪತ್ರೆಯಲ್ಲಿ ದಾಖಲಾದ ಘಟನೆಯ ಸಂದರ್ಭದಲ್ಲಿ ವಿಮೆದಾರರ ಚಿಕಿತ್ಸೆ ವೆಚ್ಚವನ್ನು ಪಾವತಿಸುತ್ತದೆ. ಇದೊಂದು ______ ಉದಾಹರಣೆಯಾಗಿದೆ. | ಬದುಕುಳಿದಾಗಿನ ಪ್ರಯೋಜನಗಳ ಪಾವತಿ | ಸರೆಂಡರ್ ಮೌಲ್ಯ | ರೈಡರ್ ಪ್ರಯೋಜನಗಳ | ಷರತ್ತುಬದ್ಧ ನಿಯೋಜನೆ | 3 |
| 49 | ಎಬಿಸಿ ವಿಮಾ ಕಂಪೆನಿ ಕೃಷ್ಣ ಅವರಿಗೆ ಸರ್ವೈವಲ್ ಕ್ಲೇಮ್‌ನ ಅವಕಾಶದೊಂದಿಗೆ ವಿಮಾ ಯೋಜನೆಯನ್ನು ಪರಿಚಯಿಸಿದೆ. ಕಂಪೆನಿ ಹೇಗೆ ಸರ್ವೈವಲ್ ಕ್ಲೈಮ್ ಅನ್ನು ಖಚಿತಪಡಿಸಿಕೊಳ್ಳುತ್ತದೆ? ಸೂಕ್ತ ಆಯ್ಕೆಯನ್ನು ಆರಿಸಿ. | ಪಾಲಿಸಿಯಲ್ಲಿ ನಿರ್ಧರಿಸಲಾದ ಷರತ್ತುಗಳಿಗೆ ಅನುಸಾರವಾಗಿ ಕ್ಲೈಮ್ ಅನ್ನು ನಿಗದಿಪಡಿಸಲಾಗುತ್ತದೆ (ಬದುಕುಳಿದಾಗ) | ಒಪ್ಪಂದದ ಆರಂಭದಲ್ಲಿಯೇ ನಿರ್ಧರಿಸಲಾದ ದಿನಾಂಕಗಳ ಆಧಾರದಲ್ಲಿ ಕ್ಲೈಮ್ ಅನ್ನು ನಿಗದಿಪಡಿಸಲಾಗುತ್ತದೆ | ಪಾಲಿಸಿದಾರನು ಒಪ್ಪಂದವನ್ನು ರದ್ದುಗೊಳಿಸಲು ನಿರ್ಧರಿಸಿದಾಗ ಕ್ಲೈಮ್ ಸಂಭವಿಸುತ್ತದೆ. | ಪಾಲಸಿದಾರನ ತಮ್ಮ ಕ್ಲೈಮ್ ಅನ್ನು ಬೆಂಬಲಿಸುವಂತೆ ನೀಡಲಾದ ವೈದ್ಯಕೀಯ ಮತ್ತು ಇತರೆ ದಾಖಲೆಗಳ ಆಧಾರದಲ್ಲಿ ಕ್ಲೈಮ್ ಅನ್ನು ನಿಗದಿಪಡಿಸಲಾಗುತ್ತದೆ | 1 |
| 50 | ಕವಿತಾ ಎಬಿಸಿ ವಿಮಾ ಕಂಪನಿಯಿಂದ ಒಂದು ಸಿ ಐ (CI) ರೈಡರ್ ಜೊತೆಗೆ ಒಂದು ಅವಧಿ ವಿಮಾ ಯೋಜನೆಯನ್ನು ಖರೀದಿಸುತ್ತಾರೆ. ಕಂಪೆನಿ ಹೇಗೆ ರೈಡರ್ ಕ್ಲೈಮ್ ಅನ್ನು ಖಚಿತಪಡಿಸಿಕೊಳ್ಳುತ್ತದೆ? ಸೂಕ್ತ ಆಯ್ಕೆಯನ್ನು ಆರಿಸಿ. | ಪಾಲಿಸಿಯಲ್ಲಿ ನಿರ್ಧರಿಸಲಾದ ಷರತ್ತುಗಳಿಗೆ ಅನುಸಾರವಾಗಿ ಕ್ಲೈಮ್ ಅನ್ನು ನಿಗದಿಪಡಿಸಲಾಗುತ್ತದೆ | ಒಪ್ಪಂದದ ಆರಂಭದಲ್ಲಿಯೆ ನಿರ್ಧರಿಸಲಾದ ದಿನಾಂಕಗಳ ಆಧಾರದಲ್ಲಿ ಕ್ಲೈಮ್ ಅನ್ನು ನಿಗದಿಪಡಿಸಲಾಗುತ್ತದೆ | ಪಾಲಿಸಿದಾರನು ಒಪ್ಪಂದವನ್ನು ರದ್ದುಗೊಳಿಸಲು ನಿರ್ಧರಿಸಿದಾಗ ಕ್ಲೈಮ್ ಸಂಭವಿಸುತ್ತದೆ. | ಪಾಲಸಿದಾರನು ತಮ್ಮ ಕ್ಲೈಮ್ ಅನ್ನು ಬೆಂಬಲಿಸುವಂತೆ ನೀಡಲಾದ ವೈದ್ಯಕೀಯ ಮತ್ತು ಇತರೆ ದಾಖಲೆಗಳ ಆಧಾರದಲ್ಲಿ ಕ್ಲೈಮ್ ಅನ್ನು ನಿಗದಿಪಡಿಸಲಾಗುತ್ತದೆ | 4 |
| 51 | ಎಂದರೆ ವಿಮಾಗಾರರು ಒಪ್ಪಂದದಲ್ಲಿ ನಿರ್ದಿಷ್ಟಗೊಳಿಸಲಾದ ಭರವಸೆಯನ್ನು ಅನುಸರಿಸಬೇಕೆನ್ನುವ ಒಂದು ಬೇಡಿಕೆಯಾಗಿದೆ. | ಕ್ಲೈಮ್ (ದಾವೆ) | ನಿರಾಕರಣೆ | ಹಕ್ಕು ನಿರಾಕರಣೆ | ಕುಂದುಕೊರತೆ | 1 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 52 | ಪಾಲಿಸಿಯ 'ಶರಣಾಗತಿ'ಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಯು ತಪ್ಪಾಗಿದೆ? | ವಿಮಾದಾರನಿಗೆ ಪಾವತಿಸಬೇಕಿರುವ ಸರೆಂಡರ್ ಮೌಲ್ಯವು ಸಾಮಾನ್ಯವಾಗಿ ಪಾವತಿಸಲಾದ ಪ್ರೀಮಿಯಮ್‌ಗಳ ಒಂದು ಪ್ರತಿಶತವಾಗಿರುತ್ತದೆ | ಒಂದು ಪಾಲಿಸಿಯು ಸಂದಾಯಿತ (ಪೇಡ್–ಅಪ್) ಮೌಲ್ಯವನ್ನು ಗಳಿಸಿದ್ದಲ್ಲಿ ಒಂದು ಪಾಲಿಸಿಯನ್ನು ಸರೆಂಡರ್ ಮಾಡಬಹುದು | ವಿಮೆ ಮಾಡಿಸಿದವರಿಗೆ ಪಾವತಿಸಲಾಗುವ ಸರೆಂಡರ್ ಮೌಲ್ಯವು ಯಾವಾಗಲೂ ನಿವ್ವಳ ಸರೆಂಡರ್ ಮೌಲ್ಯಕ್ಕಿಂತ ಕಡಿಮೆಯಾಗಿರುತ್ತದೆ | ವಿಮೆ ಮಾಡಿಸಿದವರು ಸ್ವಯಂ ಇಚ್ಛೆಯಿಂದ ಪಾಲಿಸಿಯನ್ನು ಅಂತ್ಯಗೊಳಿಸಿದಲ್ಲಿ ಸರೆಂಡರ್ ಮೌಲ್ಯವನ್ನು ನೀಡಬೇಕಿರುತ್ತದೆ | 3 |
| 53 | ಕ್ರಿಟಿಕಲ್ ಇಲ್–ನೆಸ್ (CI) ರೈಡರ್ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಯು ತಪ್ಪಾಗಿದೆ? ಸೂಕ್ತ ಆಯ್ಕೆಯನ್ನು ಆರಿಸಿ. | ಗಂಭೀರ ರೋಗವು ಕಂಡುಬಂದ ಸಂದರ್ಭದಲ್ಲಿ ಪಾಲಿಸಿ ಕರಾರಿನ ಪ್ರಕಾರ ಒಂದು ನಿಗದಿತ ಮೊತ್ತವನ್ನು ಪಾವತಿಸಲಾಗುತ್ತದೆ. | ವಿಮಾ ಕಂಪನಿಯು ಸೂಚಿಸಲಾದ ಗಂಭೀರವಾದ ರೋಗಗಳ ಪಟ್ಟಿಯಲ್ಲಿ ರೋಗವು ಒಳಗೊಂಡಿರಬೇಕು | CI ರೈಡರ್ ಪಾಲಿಸಿಯ ಅವಧಿಯಲ್ಲಿ ಉಂಟಾಗಬಹುದಾದ ಕ್ಲೈಮ್‌ಗಳಿಗೆ ಒಂದು ಉದಾಹರಣೆಯಾಗಿದೆ | ರೈಡರ್ ಪಾವತಿಗಳನ್ನು ಮಾಡಿದ ನಂತರ ಜೀವ ವಿಮಾ ಪಾಲಿಸಿಯು ಒಪ್ಪಂದವು ಕೊನೆಗೊಳ್ಳುತ್ತದೆ | 4 |
| 54 | ನಿಮೇಶ್ 20 ವರ್ಷದ ಯುನಿಟ್ ಲಿಂಕ್ಡ್ ವಿಮಾ ಯೋಜನೆಯನ್ನು ಖರೀದಿಸಿದರು. ನಿಮೇಶ್ ಪಾಲಸಿಯ ಅವಧಿಯಲ್ಲಿ ಸಾವನ್ನಪ್ಪಿದರೆ ಕೆಳಗಿನವುಗಳಲ್ಲಿ ಯಾವುದನ್ನು ಸಂದಾಯ ಮಾಡಲಾಗುತ್ತದೆ? | ಸರೆಂಡರ್ ಮೌಲ್ಯವನ್ನು ಪಾವತಿಸಲಾಗುತ್ತದೆ | ಬಾಕಿ ಕಳೆದ ನಂತರ ಪಾವತಿಸಿದ ಪ್ರೀಮಿಯಂಗಳನ್ನು ಮರಳಿಸಲಾಗುತ್ತದೆ | ಖಾತರಿಯ ಮೊತ್ತ ಅಥವ ಫಂಡ್ ಮೌಲ್ಯದಲ್ಲಿ ಯಾವುದು ಕಡಿಮೆ ಇದೆಯೊ ಅದನ್ನು ಪಾವತಿಸಲಾಗುತ್ತದೆ | ಖಾತರಿಯ ಮೊತ್ತ ಅಥವಾ ಫಂಡ್ ಮೌಲ್ಯದಲ್ಲಿ ಯಾವುದು ಹೆಚ್ಚಿದೆಯೊ ಅದನ್ನು ಪಾವತಿಸಲಾಗುತ್ತದೆ | 4 |
| 55 | ವಿಮಾದಾರರು ಪಾಲಿಸಿಯ ಪ್ರಸ್ತಾವನೆಯಲ್ಲಿ ತಪ್ಪು ವಸ್ತುಸ್ಥಿತಿಯನ್ನು ಪ್ರಸ್ತುತಪಡಿಸಿದ್ದರೆ ಎಷ್ಟು ಅವಧಿಯವರೆಗೆ ವಿಮಾ ಕಂಪೆನಿಯು ವಿಮೆಯನ್ನು ನಿರಾಕರಣೆ ಮಾಡಬಹುದಾಗಿದೆ? | 15 ದಿನಗಳವರೆಗೆ | 6 ತಿಂಗಳುಗಳವರೆಗೆ | 1 ವರ್ಷಗಳವರೆಗೆ | 2 ವರ್ಷಗಳವರೆಗೆ | 4 |
| 56 | ವಿಮಾ ಪ್ರಾಧಿಕಾರ (IRDAI)ಯ ಪಾಲಿಸಿದಾರರ ಹಿತರಕ್ಷಣೆ ಕಾಯ್ದೆ (2017) ರ ಪ್ರಕಾರ ಒಂದು ಜೀವವಿಮಾ ಪಾಲಿಸಿಯಲ್ಲಿ ದಾವೆಯ ಸಂದರ್ಭದಲ್ಲಿ ಎಲ್ಲಾ ದಾಖಲೆಗಳನ್ನು ಪೂರೈಸಿದಾಗ, ಆ ದಾವೆಯ ಬಗ್ಗೆ ಒಪ್ಪಿಗೆ ಅಥವಾ ವ್ಯಾಜ್ಯವನ್ನು ಎಷ್ಟು ದಿವಸಗಳೊಳಗಾಗಿ ವಿಮಾ ಕಂಪೆನಿ ತಿಳಿಸ ತಕ್ಕದ್ದು? | 15 ದಿವಸ | 20 ದಿವಸ | 30 ದಿವಸ | 3 ತಿಂಗಳು | 3 |
| 57 | ಪಾಲಿಸಿದಾರ ಮರಣಗೊಂಡಿರಬಹುದೇ ಎಂಬ ಸಂಶಯವಿದ್ದ ಸಂದರ್ಭದಲ್ಲಿ ನಾಮ ನಿರ್ದೇಶಿತ ವ್ಯಕ್ತಿ ಈ ಕೆಳಗಿನ ಯಾವ ಪುರಾವೆ ಕೊಡತಕ್ಕದ್ದು? | ನಗರಸಭೆಯಿಂದ ಮರಣ ಪ್ರಮಾಣ ಪತ್ರ | ನ್ಯಾಯಾಲಯದಿಂದ ಡಿಕ್ರೀ ತರಿಸಿಕೊಡಬೇಕು | ಉದ್ಯೋಗದಾತನ ಪ್ರಮಾಣ ಪತ್ರ | ಪೋಲೀಸ್ ರಿಪೋರ್ಟ್ | 2 |
| 58 | ಶ್ರೀ ಬ್ರಿಜೇಶ್ ಎಂಬುವರು ABC ವಿಮಾ ಕಂಪೆನಿಯಿಂದ 20 ವರ್ಷದ ULIP ಪಾಲಿಸಿ ಪಡಕೊಂಡಿದ್ದಾರೆ. ಪಾಲಿಸಿ ಅವಧಿಗಿಂತ ಮುಂಚಿತವಾಗಿ ಆತ ಮರಣಗೊಂಡರೆ, ವಿಮಾ ಕಂಪೆನಿ ಏನು ಕೊಡಬೇಕಾಗುತ್ತದೆ? | ಶರಣಾಗತಿ ಮೌಲ್ಯ | ಶುಲ್ಕಗಳನ್ನು ಮುರಿದು ಉಳಿದ ಪ್ರೀಮಿಯಂ ಮೊತ್ತ | ಕಡಿಮೆ ವಿಮಾ ಮೊತ್ತ ಅಥವಾ ಫಂಡ್ ಮೌಲ್ಯ | ಹೆಚ್ಚುವರಿ ವಿಮಾ ಮೊತ್ತ ಅಥವಾ ಫಂಡ್ ಮೌಲ್ಯ | 4 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 59 | ಈ ಕೆಳಗಿನವುಗಳಲ್ಲಿ ಯಾವ ಹಣವನ್ನು ಪರಭಾರೆಗೊಂಡಾತನಿಗೆ ಅಥವಾ ನಾಮನಿರ್ದೇಶಿತನಿಗೆ ನೀಡಬಹುದು? | ಮರಣದಾವೆ | ಅವಧಿ ಮುಕ್ತಾಯದ ದಾವೆ | ಜೀವಂತವಿದ್ದಾಗಿನ ದಾವೆ | ಶರಣಾಗತಿ ಮೌಲ್ಯ | 1 |
| 60 | ಈ ಕೆಳಗಿನವುಗಳಲ್ಲಿ ಯಾವ ದಾಖಲೆಯನ್ನು ಹೆಚ್ಚುವರಿಯಾಗಿ ನೈಸರ್ಗಿಕ ಸಾವಿನ ಸಂದರ್ಭಕ್ಕೆ ಹೋಲಿಸಿದಾಗ ಅಪಘಾತದ ಸಾವಿನ ಸಂದರ್ಭದಲ್ಲಿ ನೀಡಬೇಕು? | ಸ್ಮಶಾನದ ದಾಖಲಾತಿ ಪತ್ರ | ವೈದ್ಯರ ಪತ್ರ | PMR (ಪೋಸ್ಟ್‌ಮಾರ್ಟಮ್ ರಿಪೋರ್ಟ್) | ಉದ್ಯೋಗದಾತನ ಪತ್ರ | 3 |
| 61 | ನೈಸರ್ಗಿಕ ಸಾವಿಗೀಡಾದ ಸಂದರ್ಭದಲ್ಲಿ ನಾಮಿನಿಯು ಈ ಕೆಳಗಿನ ದಾಖಲೆಗಳಲ್ಲಿ ಯಾವುದನ್ನು ನೀಡಬೇಕು? ಸೂಕ್ತ ಆಯ್ಕೆಯನ್ನು ಗುರುತಿಸಿ | ವಿಚಾರಣಾ ಪತ್ರ | ಮರಣ ಪತ್ರ | PMR (ಪೋಸ್ಟ್‌ಮಾರ್ಟಮ್ ರಿಪೋರ್ಟ್) | FIR (ಮೊದಲ ಪರಿಶೀಲನಾ ದಾಖಲೆ) | 2 |
| 62 | ಶ್ರೀ ರಾಹುಲ್ ABC ಕಂಪೆನಿಯಿಂದ 20 ವರ್ಷದ ವಿಮಾ ಪಾಲಿಸಿ ಮಾಡಿಸಿದ್ದಾನೆ. 20 ವರ್ಷ ಕಳೆದಾಗ ಕಂಪೆನಿಯು ಆತನಿಗೆ ಫಂಡ್ ಮೌಲ್ಯವನ್ನು ಹಿಂತಿರುಗಿಸಿದೆ. ಹಾಗಿದ್ದರೆ ಆ ಪಾಲಿಸಿ ಯಾವುದು. | ಲಾಭಸಹಿತ ಪಾಲಿಸಿ | ಪ್ರೀಮಿಯಂ ಹಿಂತಿರಿಗಿಸುವ ಪಾಲಿಸಿ | (ULIP) ಯುನಿಟ್ ಲಿಂಕ್ಡ್ ಪಾಲಿಸಿ | ಹಣ ಹಿಂತಿರಿಗಿಸುವ ಪಾಲಿಸಿ | 3 |
| 63 | ಶ್ರೀ ವಿಶಾಲ್ ಒಂದು ವಿಮಾ ಕಂಪೆನಿಯಿಂದ 25 ವರ್ಷದ 50 ಲಕ್ಷದ ಪಾಲಿಸಿ ಪಡಕೊಂಡಿರುತ್ತಾರೆ. ಅವಧಿ ಪೂರ್ಣಗೊಂಡಾಗ ಕಂಪೆನಿಯು ಆತನಿಗೆ ಜೀವಿತ ವಿಮಾ ಮೊತ್ತವನ್ನು ಕಳೆದು ಉಳಿದ ಮೊತ್ತವನ್ನು ನೀಡುತ್ತದೆ. ಹಾಗಿದ್ದರೆ ಆ ಪಾಲಿಸಿ ಯಾವುದು? | ಲಾಭ ಸಹಿತ ಪಾಲಿಸಿ | ಪ್ರೀಮಿಯಂ ಹಿಂತಿರುಗಿಸುವ ಪಾಲಿಸಿ | (ULIP) ಯುನಿಟ್ ಲಿಂಕ್ಡ್ ಪಾಲಿಸಿ | ಮನಿಬ್ಯಾಂಕ್ ಪಾಲಿಸಿ (ಹಣ ಹಿಂತಿರುಗಿಸುವ ಪಾಲಿಸಿ) | 4 |
| 64 | ಶ್ರೀ ಸುಧೀರ್ ವಿಮಾ ಕಂಪೆನಿಯಿಂದ 20 ವರ್ಷಗಳ ಹಿಂದೆ ರೂ. 25 ಲಕ್ಷದ ವಿಮಾ ಆಸರೆ ಪಡೆದಿದ್ದಾರೆ. ಅದರ ವಾಯಿದೆ ಆಗುವಾಗ ಕಂಪೆನಿಯು ಆತನಿಗೆ ವಿಮಾ ಮೊತ್ತ ಮತ್ತು ಅದಕ್ಕಾಗುವ ಬೋನಸ್‌ನಿಂದ ಯಾವುದಾದರೂ ಬಾಕಿಯಾದ ಪ್ರೀಮಿಯಂ ಕಳದು ಸುಧೀರ್‌ರಿಗೆ ನೀಡುತ್ತದೆ. ಹಾಗಿದ್ದರೆ ಆ ಪಾಲಿಸಿ ಯಾವುದು? | ಲಾಭಾಂಶದಲ್ಲಿ ಪಾಲುದಾರರಾದ ಪಾಲಿಸಿ | ಪ್ರೀಮಿಯಂ ಹಿಂತಿರುಗಿಸುವ ಪಾಲಿಸಿ | (ULIP) ಯುನಿಟ್ ಲಿಂಕ್ಡ್ ಪಾಲಿಸಿ | ಹಣ ಹಿಂತಿರುಗಿಸುವ ಪಾಲಿಸಿ (ಮನಿಬ್ಯಾಕ್ ಪಾಲಿಸಿ) | 1 |
| 65 | ಶ್ರೀ ಕಪಿಲ್ 25 ವರ್ಷಗಳ ಅವಧಿಗೆ 50 ಲಕ್ಷದ ಒಂದು ವಿಮಾ ಆಸರೆ ಪಡೆದಿದ್ದಾರೆ. ಪಾಲಿಸಿ ಅವಧಿಯ ಒಳಗೆ ಶ್ರೀ ಕಪಿಲ್ ಒಂದು ಕಾರು ಅಪಘಾತದಲ್ಲಿ ಮರಣ ಹೊಂದುತ್ತಾರೆ. ವಿಮಾ ಕಂಪೆನಿಯು ಆತನ ನಾಮಿನಿಗೆ ವಿಮಾ ಮೊತ್ತ ಮತ್ತು ಬೋನಸ್ ಸೇರಿಸಿ ಪಾವತಿಸುತ್ತದೆ. ಹಾಗಿದ್ದರೆ ಆ ದಾವೆಯನ್ನು ಏನೆನ್ನುತ್ತಾರೆ? | ಅವಧಿ ಪೂರ್ಣಗೊಂಡ ದಾವೆ | ಮರಣ ದಾವೆ | ರೈಡರ್ ಲಾಭ | ಜೀವಂತವಾಗಿದ್ದಾಗ ಕೊಡುವ ಹಣ | 2 |
| 66 | ವಿಮಾಗಾರರಿಗೆ ವಾಸ್ತವಿಕ ಮಾಹಿತಿ ಏಕೆ ಬೇಕಾಗುತ್ತದೆ? | ಡಾಕ್ಯುಮೆಂಟೇಶನ್ ಉದ್ದೇಶಗಳಿಗಾಗಿ | ಅಪಾಯ ಒಪ್ಪಿಕೊಳ್ಳುವಿಕೆ ಮತ್ತು ಅದಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ನಿಬಂಧನೆಗಳ ಬಗ್ಗೆ ನಿರ್ಧರಿಸಲು | ನಿಯಂತ್ರಕದ ಅಗತ್ಯತೆಗಳೊಂದಿಗೆ ಹೊಂದಿಕೆಯಾಗಲು | ಗ್ರಾಹಕರ ಸೇವೆಯನ್ನು ಉತ್ತಮಪಡಿಸಲು | 2 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 67 | ಮಾನ್ಯ ಒಪ್ಪಂದದ ಯಾವ ಅಂಶ ವಿಮಾ ಪ್ರೀಮಿಯಂಗೆ ಸಂಬಂಧಿಸಿದೆ? | ಪ್ರಸ್ತಾಪ ಮತ್ತು ಅಂಗೀಕಾರ | ಒಪ್ಪಂದಕ್ಕೆ ವ್ಯಕ್ತಿ ಅಥವ ಸಂಸ್ಥೆಗಳ ಸಾಮರ್ಥ್ಯ | ಉಚಿತ ಅನುಮೋದನೆ | ಪರಿಗಣನೆ (Consideration) | 4 |
| 68 | ಯಾವುದೇ ಮೋಸದ ಉದ್ದೇಶದಿಂದ ಮಾಡಿದ ತಪ್ಪು ಹೇಳಿಕೆಗಳಿಗೆ ಸಂಬಂಧಿಸಿದ ಆಯ್ಕೆಯನ್ನು ಗುರುತಿಸಿ. | ನಿರೂಪಣೆ | ತಪ್ಪು ನಿರೂಪಣೆ | ಬಲವಂತ | ವಂಚನೆ | 2 |
| 69 | ಮಾನ್ಯ ಒಪ್ಪಂದವೆಂದು ಪರಿಗಣಿಸಬಹುದಾದ ಆಯ್ಕೆಯನ್ನು ಗುರುತಿಸಿ | ರಮೇಶನು ಆತನ ಗೆಳೆಯನಿಂದ ಅತ್ಯಂತ ಕಡಿಮೆ ದರದಲ್ಲಿ ಒಂದು ಆಸ್ತಿಯನ್ನು ಖರೀದಿಸುತ್ತಾನೆ | ರಮೇಶನ ಮಾನಸಿಕ ಸ್ಥಿತಿ ಸರಿಯಾಗಿರದ ಸಮಯದಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕುತ್ತಾನೆ | ರಮೇಶನು ಒಂದು ಒಪ್ಪಂದದಲ್ಲಿ ಭಾಗಿಯಾಗಲು ಒಬ್ಬ ಅಧಿಕಾರಿಗೆ ಲಂಚ ನೀಡುತ್ತಾನೆ | ಮಹೇಶನಿಂದ ಒಂದು ಒಪ್ಪಂದಕ್ಕೆ ಸಹಿ ಪಡೆಯಲು ರಮೇಶನು ತಪ್ಪು ಮಾಹಿತಿಯನ್ನು ನೀಡುತ್ತಾನೆ | 1 |
| 70 | ಜೂಜು ಮತ್ತು ವಿಮೆಯನ್ನು ತುಲನೆ ಮಾಡಿ | ಜೂಜು ಮತ್ತು ವಿಮೆ ಎರಡೂ ಒಂದೇ ಆಗಿವೆ | ಜೂಜಿನಲ್ಲಿ ಯಾವುದೆ ವಿಮೆಯ ಆಸಕ್ತಿ ಇರುವುದಿಲ್ಲ ಆದರೆ ವಿಮೆಯು ಅದನ್ನು ಹೊಂದಿರುತ್ತದೆ | ವಿಮೆಯಿಂದ ಕೇವಲ ಲಾಭದಾಯಕ ಫಲಿತಾಂಶಗಳು ದೊರೆಯಬಲ್ಲದು ಆದರೆ ಜೂಜಿನಿಂದ ನಷ್ಟ ಉಂಟಾಗಬಹುದು | ಜೂಜನ್ನು ಕಾನೂನಿನ ಮೂಲಕ ಜಾರಿಪಡಿಸಬಹುದು ಆದರೆ ವಿಮೆಯನ್ನು ಹಾಗೆ ಮಾಡಲಾಗುವುದಿಲ್ಲ | 2 |
| 71 | "ಕಾಂಟ್ರ್ಯಾಕ್ಟ್ ಆಫ್ ಅಡ್ಹೆಶನ್" ಅನ್ನು ಸಂಕ್ಷಿಪ್ತಗೊಳಿಸಿ | ಈ ಒಪ್ಪಂದಗಳನ್ನು ಎರಡೂ ಪಕ್ಷದವರಿಂದ ಕೂಡಿ ಸಿದ್ಧಪಡಿಸಲಾಗಿದೆ ಮತ್ತು ಇಬ್ಬರಿಂದಲೂ ಅಂಗೀಕರಿಸಬೇಕಿರುತ್ತದೆ | ಈ ಒಪ್ಪಂದಗಳನ್ನು ಒಂದು ಪಕ್ಷದವರಿಂದ ಕೂಡಿ ಸಿದ್ಧಪಡಿಸಲಾಗಿದೆ ಮತ್ತು ಇನ್ನೊಬ್ಬರು ಇದನ್ನು ಒಪ್ಪಿಕೊಳ್ಳಬಹುದು ಅಥವ ತಿರಸ್ಕರಿಸಬಹುದು | ಈ ಒಪ್ಪಂದಗಳನ್ನು ಒಂದು ಪಕ್ಷದವರಿಂದ ಸಿದ್ಧಪಡಿಸಲಾಗಿದೆ ಮತ್ತು ಇನ್ನೊಬ್ಬರು ಇದನ್ನು ಒಪ್ಪಿಕೊಳ್ಳಲೇಬೇಕು | ಈ ಒಪ್ಪಂದಗಳು ಎರಡೂ ಪಕ್ಷಗಳ ಬದ್ಧತೆಯಾಗಿರುತ್ತದೆ | 2 |
| 72 | ರಮೇಶ್ ತನ್ನ ಕಂಪನಿಯನ್ನು ಮಾರುವ ಮೊದಲು ತನ್ನ ಕಂಪನಿಯ ಆಯವ್ಯಯ ಪಟ್ಟಿ (ಬ್ಯಾಲೆನ್ಸ್ ಶೀಟ್) ಯನ್ನು ತಿದ್ದಿ ಹೊಂದಿಸುತ್ತಾರೆ. ಅವನ ಈ ಕ್ರಿಯೆಯನ್ನು ಕೆಳಗಿನ ಆಯ್ಕೆಗಳಲ್ಲಿ ವಿಂಗಡಿಸಿ. | ತಪ್ಪು | ಬಲವಂತ | ತಪ್ಪು ನಿರೂಪಣೆ | ವಂಚನೆ | 4 |
| 73 | ಜೀವ ವಿಮೆಯ ವಿಷಯ ವಸ್ತು ಯಾವುದು? | ಪ್ರೀಮಿಯಂ | ಮನುಷ್ಯನ ಜೀವ | ಆಸ್ತಿ | ಕೀರ್ತಿ ಪ್ರತಿಷ್ಠೆ | 2 |
| 74 | ಉತ್ತಮ ನಂಬಿಕೆಯ ತತ್ವವನ್ನು ಪ್ರದರ್ಶಿಸುವ ಒಂದು ಸನ್ನಿವೇಶವನ್ನು ಆಯ್ಕೆ ಮಾಡಿ. | ಸಮಯಕ್ಕೆ ಸರಿಯಾಗಿ ಪ್ರೀಮಿಯಂ ಪಾವತಿಸುವಿಕೆ | ಒಂದು ವಿಮಾ ಪ್ರಸ್ತಾಪ ಅರ್ಜಿಯಲ್ಲಿನ ಎಲ್ಲಾ ಅಗತ್ಯವಿರುವ ವಾಸ್ತವಿಕ ಮಾಹಿತಿಯನ್ನು ತಿಳಿಸುವಿಕೆ | ಒಂದು ವಿಮಾ ಪ್ರಸ್ತಾಪ ಅರ್ಜಿಯಲ್ಲಿ ಎಲ್ಲಾ ಅಗತ್ಯವಿರುವ ವಾಸ್ತವಿಕ ಮಾಹಿತಿಯನ್ನು ತಪ್ಪಾಗಿ ತಿಳಿಸುವಿಕೆ | ಒಂದು ವಿಮಾ ಪ್ರಸ್ತಾಪ ಅರ್ಜಿಯಲ್ಲಿ ಅನಗತ್ಯ ಮಾಹಿತಿಯನ್ನು ತಿಳಿಸುವಿಕೆ | 2 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 75 | ಜೀವ ವಿಮೆಗೆ ಸಂಬಂಧಿಸಿದಂತೆ ಕೆಳಗಿನ ಎರಡು ಹೇಳಿಕೆಗಳನ್ನು ಪರಿಶೀಲಿಸಿ ಮತ್ತು ಸರಿಯಾದುದನ್ನು ಆಯ್ಕೆ ಮಾಡಿ I. ವಯಸ್ಸು ವಾಸ್ತವಿಕ ಮಾಹಿತಿಯಾಗಿದೆ ಮತ್ತು ಅಂಡರ್ ರೈಟಿಂಗ್‌ನ ಷರತ್ತುಗಳ ಮೇಲೆ ಪರಿಣಾಮ ಬೀರುತ್ತದೆ II. ವಯಸ್ಸು ಭಿನ್ನವಾಗಿದೆ ಎಂದು ಕಂಡುಬಂದರೆ, ಅದರ ಪರಿಣಾಮ ಪ್ರೀಮಿಯಂ ಮೇಲೆ ಮಾತ್ರ ಆಗುತ್ತದೆ | ಕೇವಲ ಹೇಳಿಕೆ I ಮಾತ್ರ ಸರಿಯಾಗಿದೆ | ಕೇವಲ ಹೇಳಿಕೆ II ಮಾತ್ರ ಸರಿಯಾಗಿದೆ | ಹೇಳಿಕೆ I ಮತ್ತು II ಎರಡು ಸರಿಯಾಗಿವೆ | ಹೇಳಿಕೆ I ಮತ್ತು II ರಲ್ಲಿ ಯಾವುದೂ ಸರಿ ಇಲ್ಲ | 1 |
| 76 | ಕಾನೂನಿನಡಿ ಒಂದು ಒಪ್ಪಂದವನ್ನು ವಿಸರ್ಜಿಸುವುದರ ಕಾರಣವನ್ನು ಆಯ್ಕೆ ಮಾಡಿ. | ಹತಾಶೆ | ತಪ್ಪು | ತಪ್ಪು ನಿರೂಪಣೆ | ಮರೆಮಾಚುವಿಕೆ | 3 |
| 77 | ವಿಮಾ ಒಪ್ಪಂದ ಕೊಂಡುಕೊಂಡಾಗ ವಿಮಾ ಒಪ್ಪಂದದ ನಿಯಮಗಳನ್ನು ವಿಧಿಸಲು ಬಳಸುವ ದಸ್ತಾವೇಜನ್ನು ಹೆಸರಿಸಿ, ಸೂಕ್ತ ಆಯ್ಕೆಯನ್ನು ಆರಿಸಿ. | ಪಾಲಿಸಿ | ಒಪ್ಪಂದ | ಅಧಿಕಾರ ನೀಡಿಕೆ | ಸಮ್ಮತಿಸೂಚಿಸುವಿಕೆ | 1 |
| 78 | ವಿಮಾದಾರರು ಜೀವ ವಿಮೆಯ ವಿಷಯವಸ್ತುವಿನಲ್ಲಿ ಹೊಂದಿರುವ ಆಸಕ್ತಿಯನ್ನು ಹೆಸರಿಸಿ. ಸೂಕ್ತ ಆಯ್ಕೆಯನ್ನು ಆರಿಸಿ. | ಊಹೆಯ ಆಸಕ್ತಿ | ಪಂದ್ಯದ ಆಸಕ್ತಿ | ವಿಮೆ ಯೋಗ್ಯ ಆಸಕ್ತಿ | ನಷ್ಟ ಪರಿಹಾರ ಆಸಕ್ತಿ | 3 |
| 79 | ನೀವು ವಿಮಾಗಾರ ಮತ್ತು ವಿಮಾದಾರರ ನಡುವಿನ ಒಪ್ಪಂದ ಹೇಗೆ ವಿವರಿಸುತ್ತೀರಿ? ಸೂಕ್ತ ಆಯ್ಕೆಯನ್ನು ಆರಿಸಿ. | ಮಧ್ಯಂತರ ಒಪ್ಪಂದ | ತಾತ್ಕಾಲಿಕ ಒಪ್ಪಂದ | ಸ್ಥಿರ ಒಪ್ಪಂದ | ಅನಿಶ್ಚಿತತೆಯ ಒಪ್ಪಂದ | 4 |
| 80 | ಸಾಮಾನ್ಯ ಮತ್ತು ವಿಮಾ ಕರಾರುಗಳ ಮತ್ತು ಕಾನೂನು ಒಪ್ಪಂದಗಳ ನಡುವಿನ ಪ್ರಮುಖ ವ್ಯತ್ಯಾಸವೆಂದರೆ: | ವಿಮಾ ಒಪ್ಪಂದಗಳು ಅತ್ಯುತ್ತಮ ನಂಬಿಕೆಯ ಒಪ್ಪಂದಗಳಾಗಿರುತ್ತವೆ | ವಿಮಾ ಒಪ್ಪಂದಗಳು ಕಾನೂನಿನ ಪ್ರಕಾರ ಜಾರಿಗೊಳಿಸಬಹುದಾದ ಒಪ್ಪಂದಗಳಾಗಿರುತ್ತವೆ | ವಿಮಾ ಒಪ್ಪಂದಗಳು ಯಾವಾಗಲೂ ಲಾಭದಾಯಕವಾಗಿರುತ್ತವೆ | ವಿಮಾ ಒಪ್ಪಂದಗಳು ಏನೇ ಆದರೂ ಸಹ ಯಾವುದೇ ಕಾನೂನಿಗೆ ಒಳಪಡುವುದಿಲ್ಲ | 1 |
| 81 | ಜೀವವಿಮೆಯ ಸಂದರ್ಭದಲ್ಲಿ ವಿಮಾಸಕ್ತಿಯ ಇರಬೇಕಾದ ಸಮಯ ಈ ವಿಷಯದ ಮೇಲೆ ಶ್ರೀ ರಾಜನ್ ರಿಗೆ ಸಲಹೆ ನೀಡಿ. | ಪಾಲಿಸಿಯನ್ನು ಖರೀದಿಸುವಾಗ ಮಾತ್ರ | ಒಂದು ಕ್ಲೈಮ್ ಮಾಡುವ ಸಮಯದಲ್ಲಿ ಮಾತ್ರ | ಪಾಲಿಸಿಯನ್ನು ಖರೀದಿಸುವಾಗ ಮತ್ತು ಕ್ಲೈಮ್ ಮಾಡುವ ಸಮಯದಲ್ಲಿ | ಜೀವ ವಿಮೆಯ ವಿಷಯದಲ್ಲಿ ಯಾವುದೇ ವಿಮಾ ಆಸಕ್ತಿಯ ಅಗತ್ಯವಿರುವುದಿಲ್ಲ | 1 |
| 82 | ಆಸ್ತಿ ವಿಮೆ ಸಂದರ್ಭದಲ್ಲಿ ಯಾವಾಗ ವಿಮಾಸಕ್ತಿಯು ಇರಬೇಕು ಎಂಬ ವಿಷಯದ ಮೇಲೆ ಮಿಸ್ ಅನಿತಾ ಅವರಿಗೆ ಸಲಹೆ ನೀಡಿ | ಪಾಲಿಸಿಯನ್ನು ಖರೀದಿಸುವಾಗ ಮಾತ್ರ | ಒಂದು ಕ್ಲೈಮ್ ಮಾಡುವ ಸಮಯದಲ್ಲಿ ಮಾತ್ರ | ಪಾಲಿಸಿಯನ್ನು ಖರೀದಿಸುವಾಗ ಮತ್ತು ಕ್ಲೈಮ್ ಮಾಡುವ ಸಮಯದಲ್ಲಿ | ಆಸ್ತಿ ವಿಮೆಗಾಗಿ ಯಾವುದೇ ವಿಮಾ ಆಸಕ್ತಿಯ ಅಗತ್ಯವಿರುವುದಿಲ್ಲ | 3 |
| 83 | ಮಹೇಶ್ ತಮ್ಮ ಮನೆಯ ಮೇಲೆ ವಿಮಾ ಪಾಲಿಸಿ ತೆಗೆದುಕೊಳ್ಳುತ್ತಾರೆ. ಅವರು ಪಾಲಿಸಿ ತೆಗೆದುಕೊಂಡ ಒಂದೆರಡು ತಿಂಗಳುಗಳ ನಂತರ ತಮ್ಮ ಮನೆಯನ್ನು ಮಾರಾಟ ಮಾಡುತ್ತಾರೆ. ಮನೆಗೆ ಕೆಲವು ಹಾನಿಯಾದ ಸಂದರ್ಭದಲ್ಲಿ ಮಹೇಶ್ ಕ್ಲೇಮ್ ಪಡೆಯಬಹುದೇ? | ಹೌದು, ಪಾಲಿಸಿಯನ್ನು ತೆಗೆದುಕೊಳ್ಳುವಾಗ ವಿಮಾ ಆಸಕ್ತಿಯು ಇತ್ತು | ಹೌದು, ಮನೆಯ ಈಗಿನ ಮಾಲಿಕ ಒಪ್ಪಿದಲ್ಲಿ | ಹೌದು, ಈ ಮನೆಯನ್ನು ಮಾರಾಟ ಮಾಡಿದ ಒಂದು ವರ್ಷದ ಒಳಗೆ ಕ್ಲೈಮ್ (ದಾವೆ) ಪಡೆಯಬಹುದು | ಇಲ್ಲ, ಆತನಿಗೆ ಆ ಮನೆಯ ಮೇಲೆ ಯಾವುದೇ ವಿಮಾ ಆಸಕ್ತಿ ಇಲ್ಲ | 4 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 84 | ಶ್ರೀ ರಾಜನ್ ಕುದುರೆಯ ಮೇಲಿಂದ ಕೊಚ್ಚೆ ಗುಂಡಿಯಲ್ಲಿ ಬಿದ್ದರು. ಅವರಿಗೆ ಆ ಮಂಚದಲ್ಲೇ ಬಹಳ ಕಾಲ ಬಿದ್ದಿರಬೇಕಾಯಿತು. ಬಿದ್ದ ಕಾರಣದಿಂದ ಅವರ ಕಾಲು ಮುರಿಯಿತು ಮತ್ತು ಅವರಿಗೆ ತೀವ್ರವಾದ ನ್ಯುಮೋನಿಯಾ ತಗಲುವುದಕ್ಕೆ ಕಾರಣವಾಯಿತು. ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅವರು ನ್ಯುಮೋನಿಯಾದ ಪರಿಣಾಮವಾಗಿ ಮರಣ ಹೊಂದುತ್ತಾರೆ. ಈ ಸಂದರ್ಭದಲ್ಲಿ ಸಾವಿನ ಸಮೀಪದ ಕಾರಣ ಏನು? | ನಿಮೋನಿಯಾ | ಕೆಳಕ್ಕೆ ಬಿದ್ದ ಕಾರಣ ಉಂಟಾದ ಕಾಲಿನ ಪೆಟ್ಟು | ವೈದ್ಯರ ನಿರ್ಲಕ್ಷತೆ | ಆಸ್ಪತ್ರೆಯಲ್ಲಿನ ಚಿಕಿತ್ಸೆ | 2 |
| 85 | ರಮೇಶ್ ಮದುವೆಯಾಗಿದ್ದು, ತಮ್ಮ ಸ್ನೇಹಿತನ ಜೀವದ ಮೇಲೆ ಜೀವವಿಮೆ ಖರೀದಿಸಬಯಸುತ್ತಾರೆ. ಅವರು ಹಾಗೆ ಮಾಡಲು ಸಾಧ್ಯವೇ ಎಂಬುದನ್ನು ಕಂಡುಹಿಡಿಯಿರಿ. | ಹೌದು, ರಮೇಶನು ಅವನ ಗೆಳೆಯನ ಜೀವಕ್ಕೆ ವಿಮೆ ಮಾಡಿಸಬಹುದು | ಇಲ್ಲ, ರಮೇಶನು ಆತನ ಗೆಳೆಯನ ಜೀವಕ್ಕೆ ವಿಮೆ ಮಾಡಿಸಲು ಸಾಧ್ಯವಿಲ್ಲ ಏಕೆಂದರೆ ಅವನ ಮದುವೆಯಾಗಿದೆ | ಇಲ್ಲ, ರಮೇಶನು ಆತನ ಗೆಳೆಯನ ಜೀವಕ್ಕೆ ವಿಮೆ ಮಾಡಿಸಲು ಸಾಧ್ಯವಿಲ್ಲ ಏಕೆಂದರೆ ಇಲ್ಲಿ ಯಾವುದೇ ವಿಮಾ ಆಸಕ್ತಿ ಇಲ್ಲ | ಇಲ್ಲ, ಕ್ಯಾವಿಯೆಟ್ ಎಂಪ್ಟರ್ (ಖರೀದಿಸುವವನಿಗೆ ಅರಿವಿರಲಿ) ತತ್ವದ ಕಾರಣ ರಮೇಶನು ಆತನ ಗೆಳೆಯನ ಜೀವಕ್ಕೆ ವಿಮೆ ಮಾಡಿಸಲು ಸಾಧ್ಯವಿಲ್ಲ | 3 |
| 86 | ಕೆಳಗಿನ ಯಾವ ಸಂಸ್ಥೆಗಳು ಭಾರತದಲ್ಲಿ ವಿಮಾ ಕಂಪೆನಿಗಳನ್ನು ನಿಯಂತ್ರಿಸುತ್ತವೆ? | ಆರ್ ಬಿ ಐ ಮತ್ತು ಹಣಕಾಸು ಸಚಿವಾಲಯ ಒಟ್ಟಿಗೆ | ಸೆಬಿ ಮತ್ತು ಆಂಫಿ (ಎಎಮ್ ಎಫ್ ಆಯ್) ಒಟ್ಟಿಗೆ | ಐ ಆರ್ ಡಿ ಎ ಐ (ವಿಮಾ ಪ್ರಾಧಿಕಾರ) | ವಿತ್ತ ಕಚೇರಿ | 3 |
| 87 | ಕೆಳಗಿನವುಗಳಲ್ಲಿ ಯಾವುವು ಐ ಆರ್ ಡಿ ಎ ಐ ನಿಯಂತ್ರಣದಲ್ಲಿಲ್ಲ? | ತೃತೀಯಪಕ್ಷದ ಆಡಳಿತಗಾರರು | ವಿಮಾ ದಳ್ಳಾಳಿ | ಸಿ ಎ ಎಸ್ ಎ ಏಜೆಂಟರು | ಕೋರ್ಪರೇಟ್ ಏಜೆಂಟರು | 3 |
| 88 | ಕೆಳಗಿನ ಯಾವ ಹೇಳಿಕೆಯು ಸರಿಯಾಗಿದೆ? | ವಿಮಾ ನಿಬಂಧನೆಗಳ ಮುಖ್ಯ ಉದ್ದೇಶವು ಪಾಲಿಸಿದಾರರನ್ನು ರಕ್ಷಿಸುವದಾಗಿದೆ | ಐ ಆರ್ ಡಿ ಎ ಮಾಡಿದ ನಿಬಂಧನೆಗಳು ವಿಮಾ ಕಂಪನಿಗಳು ಆರ್ಥಿಕವಾಗಿ ಸಶಕ್ತ ಸಂಸ್ಥೆಯಾಗಿರಬೇಕೆಂದಿರ ದೇ ಸಾಮಾಜಿಕವಾಗಿ ಜವಾಬ್ದಾರವಾದ ಸಂಸ್ಥೆಗಳಾಗಿವೆಯೆಂಬುದ ನ್ನು ಖಾತ್ರಿಪಡಿಸುವದಾಗಿದೆ. | ವಿಮೆಯು ಭಾರತದ ಒಪ್ಪಂದ ಕಾಯಿದೆಯ ನಿಬಂಧನೆಗಳಿಗೆ ಮತ್ತು ಇತರ ಕಾಯಿದೆಗಳಿಗನುಗುಣವಾ ಗಿ ಸಂಪೂರ್ಣವಾಗಿ ಕಾಯಿದೆಯ ಒಪ್ಪಂದವಾಗಿದೆ | ಐ.ಆರ್.ಡಿ.ಎ.ಐ. ಎಲ್ಲಾ ವಿಮಾ ಕಂಪೆನಿಗಳ ನೋಂದಣಿಯಿಂದ ಅದರ ಕೆಲಸ ಕಾರ್ಯಗಳನ್ನು, ಹೂಡಿಕೆಯನ್ನು ಮತ್ತು ಲೆಕ್ಕ ಪತ್ರಗಳನ್ನು ನಿಯಂತ್ರಿಸುತ್ತದೆ. | 1 |
| 89 | ವಿಮಾ ನಿಯಂತ್ರಣದ ಪ್ರಧಾನ ಉದ್ದೇಶವೇನು? ಸೂಕ್ತ ಉತ್ತರವನ್ನು ಆರಿಸಿ | ಜನಸಂಖ್ಯೆಯ ಗ್ರಾಮೀಣ ಭಾಗ ಮತ್ತು ಅಶಕ್ತ ಭಾಗಗಳು ಸಾಕಷ್ಟು ವಿಮಾ ರಕ್ಷಣೆಯನ್ನು ಹೊಂದುವದನ್ನು ಖಾತ್ರಿಪಡಿಸಲು | ವಿಮಾ ಕಂಪನಿಗಳು ದೀರ್ಘಕಾಲ ಬಾಳಲು ಸಾಕಾಗುವಷ್ಟು ಲಾಭಗಳನ್ನು ಉತ್ಪಾದಿಸುವದನ್ನು ಖಾತ್ರಿಪಡಿಸಲು | ಭಾರತದ ಎಲ್ಲ ನಾಗರಿಕರಿಗೆ ವಿಮಾ ರಕ್ಷಣೆಯ ಖಾತ್ರಿಯನ್ನೊದಗಿಸಲು | ಪಾಲಿಸಿದಾರರ ಹಿತರಕ್ಷಣೆಯು ಇದರ ಪ್ರಧಾನ ಉದ್ದೇಶವಾಗಿದೆ. | 4 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 90 | ಕೆಳಗಿನವುಗಳಲ್ಲಿ ಯಾವ ಸಂಸ್ಥೆಯು ಭಾರತದಲ್ಲಿ ವೈಯಕ್ತಿಕ ಪ್ರತಿನಿಧಿಗಳ ಕಾರ್ಯನಿರ್ವಹಿಸಲು ಪರವಾನಗಿ ನೀಡಬಹುದಾಗಿದೆ? | ಹಣಕಾಸು ಮಂತ್ರಾಲಯ | ಭಾರತ ಸರಕಾರ | ಜೀವ ವಿಮಾ ನಿಗಮ (ಎಲ್ ಆಯ್ ಸಿ) ಮತ್ತು ಸಾಮಾನ್ಯ ವಿಮಾ ನಿಗಮ (ಜಿ ಆಯ್ ಸಿ) ಏಕತ್ರಿತವಾಗಿ ಒಟ್ಟಿಗೆ | ಭಾರತದ ವಿಮಾ ಪ್ರಾಧಿಕಾರ ಸಂಸ್ಥೆ (IRDAI) | 4 |
| 91 | ಕೆಳಗಿನವುಗಳಲ್ಲಿ ಯಾವ ಸಂಸ್ಥೆಯು ಭಾರತದಲ್ಲಿ ಬಂಡವಾಳ ಮಾರುಕಟ್ಟೆಯನ್ನು ನಿಯಂತ್ರಿಸುತ್ತದೆ? | ಆರ್ ಬಿ ಆಯ್ (RBI) | ಸೆಬಿ (SEBI) | ಐ ಆರ್ ಡಿ ಎ ಐ (IRDAI) | ಎ ಎಮ್ ಎಫ್ ಐ (AMFI) | 2 |
| 92 | ಕೆಳಗಿನವುಗಳಲ್ಲಿ ಯಾವ ಸಂಸ್ಥೆಯು ಭಾರತದಲ್ಲಿ ಬ್ಯಾಂಕುಗಳನ್ನು ನಿಯಂತ್ರಿಸುತ್ತದೆ? | ಆರ್ ಬಿ ಆಯ್ (RBI) | ಸೆಬಿ (SEBI) | ಐ ಆರ್ ಡಿ ಎ ಐ (IRDAI) | ಎ ಎಮ್ ಎಫ್ ಐ (AMFI) | 1 |
| 93 | ಮೂರನೆಯ ಪಕ್ಷದ ಆಡಳಿತವು (ಟಿಪಿಎಗಳು) ಈ ಕೆಳಗಿನ ಯಾವ ಸಂಸ್ಥೆಯ ಮೂಲಕ ನಿಯಂತ್ರಿಸಲ್ಪಟ್ಟಿವೆ? | ಜೀವ ವಿಮಾ ನಿಗಮ (ಎಲ್ ಆಯ್ ಸಿ) ಮತ್ತು ಸಾಮಾನ್ಯ ವಿಮಾ ನಿಗಮ (ಜಿ ಆಯ್ ಸಿ) ಏಕತ್ರಿತವಾಗಿ ಒಟ್ಟಿಗೆ | ಐ ಆರ್ ಡಿ ಎ ಐ (IRDAI) | ಭಾರತದ ವಿಮಾ ದಲ್ಲಾಳಿಗಳ ಸಂಘ | ವಿತ್ತ ಸಚಿವಾಲಯ | 2 |
| 94 | ಕೆಳಗಿನವುಗಳಲ್ಲಿ ಯಾವುದು ಭಾರತದಲ್ಲಿ ವಿಮಾ ವ್ಯಾಪಾರವನ್ನು ನಿಯಂತ್ರಿಸುವ ದೇಶದ ಮೂಲಭೂತ ವಿಮಾ ಶಾಸನವಾಗಿದೆ? | ವಿಮಾ ಕಾಯಿದೆ, 1938 | ಐ ಆರ್ ಡಿ ಎ ಕಾಯಿದೆ, 1999 | ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ನಿಗಮ ಕಾಯಿದೆ, 1961 | ಸಾರ್ವಜನಿಕ ಹೊಣೆಗಾರಿಕೆ ವಿಮಾ ಕಾಯಿದೆ 1991 | 2 |
| 95 | ಜೀವ ವಿಮೆ, ಸಾಮಾನ್ಯ ವಿಮೆ, ಮತ್ತು ಆರೋಗ್ಯ ವಿಮೆ ಈ ಎರಡೂ ಏಜೆಂಟ್‌ರಾಗಿ ಕಾರ್ಯನಿರ್ವಹಿಸಲು ಪರವಾನಗಿ ಹೊಂದಿರುವ ವಿಮಾ ಏಜೆಂಟರನ್ನು, _____ ಎಂದು ಕರೆಯಲಾಗುತ್ತದೆ. | ದಲ್ಲಾಳಿಗಳು | ಕಾರ್ಪೋರೇಟ್ ಏಜೆಂಟರು | ತೃತೀಯ ಪಕ್ಷದ ಆಡಳಿತಗಾರರು | ಕಾಂಪಸಿಟ್ ವಿಮಾ ಪ್ರತಿನಿಧಿಗಳು | 4 |
| 96 | ವಿಮಾ ಉದ್ಯಮವನ್ನು ನಿಯಂತ್ರಿಸಲು ಮತ್ತು ಅಭಿವೃದ್ಧಿಪಡಿಸಲು ಸ್ವತಂತ್ರ ಅಧಿಕಾರವನ್ನು 2000 ರಲ್ಲಿ _____ ಅನ್ನು ಸ್ಥಾಪಿಸಲಾಯಿತು. | ಆರ್ ಬಿ ಆಯ್ (RBI) | ಸೆಬಿ (SEBI) | ಐ ಆರ್ ಡಿ ಎ ಐ (IRDAI) | ಎ ಎಮ್ ಎಫ್ ಐ (AMFI) | 3 |
| 97 | ಈ ಕೆಳಗಿನ ಯಾವ ಸಂಸ್ಥೆ ಪಾಲಿಸಿದಾರರ ಹಿತರಕ್ಷಣೆಗೋಸ್ಕರ ಕಾನೂನನ್ನು ರಚಿಸಿ ವಿಮಾಗಾರರನ್ನು ಮತ್ತು ಅದರ ಮಧ್ಯವರ್ತಿಗಳನ್ನು ತನ್ನ ಹಿಡಿತಕ್ಕೆ ತಂದಿದೆ? | ಜೀವ ವಿಮಾ ಕೌನ್ಸಿಲ್ ಮತ್ತು ಸಾಮಾನ್ಯ ವಿಮಾ ಕೌನ್ಸಿಲ್ ಜೊತೆಯಾಗಿ | ಭಾರತದ ಪಾಲಿಸಿದಾರರ ಸಂಘಟನೆ (P.A.I) | IRDAI ವಿಮಾ ಪ್ರಾಧಿಕಾರ ಸಂಸ್ಥೆ | LIC & GIC | 3 |
| 98 | ಕೆಳಗಿನ ಯಾವ ಕಾಯಿದೆಯು ವಿಮಾ ಕಂಪನಿಗಳ ಮೇಲ್ವಿಚಾರಣೆ ಮತ್ತು ಚಟುವಟಿಕೆಗಳ ನಿಯಂತ್ರಣವನ್ನು ಒದಗಿಸುತ್ತದೆ? | ಐ ಆರ್ ಡಿ ಎ ಆ್ಯಕ್ಟ್, 1999 | ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ನಿಗಮ ಕಾಯಿದೆ, 1961 | ಸಾರ್ವಜನಿಕ ಹೊಣೆಗಾರಿಕೆ ವಿಮಾ ಕಾಯಿದೆ, 1991 | ವಿಮಾ ಕಾಯಿದೆ 1938 | 1 |
| 99 | ಸಾಮಾನ್ಯಕ್ಕಿಂತ ಹೆಚ್ಚಿನ ಅಪಾಯವನ್ನು ಹೊಂದಿರುವ ಅಥವಾ ವಿಮಾ ರಕ್ಷಣೆಗೆ ಯೋಗ್ಯರಲ್ಲದ ಆದರೆ ವಿಮೆಯನ್ನು ಪಡೆಯಲು ತಮ್ಮ ವಾಸ್ತವ ಸ್ಥಿತಿ ಅಥವಾ ಪರಿಸ್ಥಿತಿಯನ್ನು ಮುಚ್ಚಿಡುವ ಅಥವಾ ಸುಳ್ಳು ಹೇಳುವ ಅರ್ಜಿಗಳನ್ನು ಒಂದು ವಿಮಾ ಸಂಸ್ಥೆ ಸ್ವೀಕರಿಸಿದರೆ ಅದನ್ನು _____ ಎನ್ನುತ್ತಾರೆ. ಸೂಕ್ತ ಆಯ್ಕೆಯನ್ನು ಆರಿಸಿ. | ಇನ್ಸ್ಯೂರೆನ್ಸ್ ಸ್ಕ್ರೀನಿಂಗ್ | ಪ್ರತಿಕೂಲ ಆಯ್ಕೆ | ಅಂಡರ್ ರೈಟಿಂಗ್ ಪ್ರಮಾದ | ಪ್ರಸ್ತಾಪನಾ ಪತ್ರ ಪರೀಕ್ಷೆ | 3 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 100 | ವಿಮಾ ಕಾಯಿದೆಯು ______ ರಂದು ಜಾರಿಗೆ ಬಂದಿತು. | 1 ಜೂನ್ 1938 | 1 ಜುಲೈ 1938 | 1 ಜೂನ್ 1939 | 1 ಜುಲೈ 1939 | 3 |
| 101 | ಐಆರ್‌ಡಿಎ ಆಕ್ಟ್ 1999 ಅಡಿಯಲ್ಲಿ ಐಆರ್‌ಡಿಎಯನ್ನು _____ ರಲ್ಲಿ ಸ್ಥಾಪಿಸಲಾಯಿತು. | 1999 | 2000 | 2002 | 2003 | 2 |
| 102 | 1938 ರ ವಿಮಾ ಕಾಯಿದೆಯ _______ ರ ಅಡಿಯಲ್ಲಿ ಒಂದು ವಿಮಾ ಪಾಲಿಸಿಯನ್ನು ಪಡೆಯಲು ಪ್ರೇರಣೆಯಾಗಿ ರಿಯಾಯಿತಿಗಳ ಬಳಕೆಯನ್ನು ನಿಷೇದಿಸುತ್ತದೆ | ಸೆಕ್ಷನ್ 38 | ಸೆಕ್ಷನ್ 41 | ಸೆಕ್ಷನ್ 45 | ಸೆಕ್ಷನ್ 64–ಗಿಃ | 2 |
| 103 | 1938 ರ ವಿಮಾ ಕಾಯಿದೆಯ ______ ರ ಅಡಿಯಲ್ಲಿ ವಿಮಾ ಪಾಲಿಸಿಗಳ ನಾಮ ನಿರ್ದೇಶನಕ್ಕಾಗಿ ನಿಯಮಗಳು ಸೂಚಿಸುತ್ತದೆ. | ಸೆಕ್ಷನ್ 39 | ಸೆಕ್ಷನ್ 41 | ಸೆಕ್ಷನ್ 45 | ಸೆಕ್ಷನ್ 64–ಗಿಃ | 1 |
| 104 | ನಿರ್ದಿಷ್ಟಪಡಿಸಿದ ವ್ಯಕ್ತಿಯ ಕನಿಷ್ಠ ಶೈಕ್ಷಣಿಕ ಅರ್ಹತೆ ______ ಆಗಿದೆ (Specified Person) | ವರ್ಗ 10 | ವರ್ಗ 12 | ಪದವೀಧರ | ಸ್ನಾತಕೋತ್ತರ ಪದವೀಧರ | 2 |
| 105 | ಒಬ್ಬ ಅರ್ಜಿದಾರನು ವಿಮೆದಾರನ ವಿಮಾ ಏಜೆಂಟ್ ಆಗಿ ಅಪಾಯಿಂಟ್ಮೆಂಟ್ ಕೋರಿ, ಅರ್ಜಿಯನ್ನು ಫಾರ್ಮ್ನಲ್ಲಿ ಸಲ್ಲಿಸಬೇಕು: –, ವಿಮೆದಾರನ ––– ಗೆ. | I-A, ಗೊತ್ತುಪಡಿಸಿದ ಅಧಿಕೃತ | A.I-A, ಮೇಲ್ಮನವಿ ಅಧಿಕಾರಿ | I-B, ಗೊತ್ತುಪಡಿಸಿದ ಅಧಿಕೃತ | I-B, ಮೇಲ್ಮನವಿ ಅಧಿಕಾರಿ | 1 |
| 106 | (IGMS) ಏಕೀಕೃತ ದೂರು ನಿರ್ವಹಣಾ ವ್ಯವಸ್ಥೆಯನ್ನು _______ ದಿಂದ ಆರಂಭಿಸಲಾಗಿದೆ. | ಭಾರತೀಯ ಪಾಲಿಸಿದಾರರ ಅಸೋಶಿಯೇಶನ್ | ಐಆರ್‌ಡಿಎಐ (IRDAI) | ಜೀವ ವಿಮಾ ಕೌನ್ಸಿಲ್ | ಭಾರತ ಸರ್ಕಾರ | 2 |
| 107 | ಕೆಳಗಿನವುಗಳಲ್ಲಿ ಯಾವುದು ಗ್ರಾಹಕರ ಒಂದು ಮಾನ್ಯ ದೂರಿಗೆ ಆಧಾರವಾಗಬಹುದು? | ಅಂಗಡಿಯವನು ಉತ್ಪನ್ನಕ್ಕೆ ಯಾವುದೇ ರಿಯಾಯಿತಿಯನ್ನು ನೀಡುತ್ತಿಲ್ಲ | ಪ್ಯಾಕೇಜಿನ ಎಂ ಆರ್ ಪಿ ಪ್ರಕಾರ ಹಣವನ್ನು ತೆಗೆದುಕೊಂಡಿದ್ದಾನೆ | ಅಂಗಡಿಯವನು ಒಂದು ನಿರ್ದಿಷ್ಟ ಉತ್ಪನ್ನವನ್ನು ನೀಡಲು ವಿಫಲವಾಗಿದ್ದಾನೆ | ಗ್ರಾಹಕನು ಕೊಂಡು ಕೊಂಡ ವಸ್ತುಗಳಲ್ಲಿ ಒಂದು ಅಥವಾ ಹೆಚ್ಚು ದೋಷಗಳಿವೆ | 4 |
| 108 | ಕೆಳಗಿನವುಗಳಲ್ಲಿ ಯಾವುದು ಗ್ರಾಹಕರ ಒಂದು ಮಾನ್ಯ ದೂರಿಗೆ ಆಧಾರವಾಗಲು ಸಾಧ್ಯವಿಲ್ಲ? | ಅಂಗಡಿಯವನು ಪ್ಯಾಕೇಜಿನಲ್ಲಿ ತೋರಿಸಿರುವುದಕ್ಕಿಂತಲೂ ಹೆಚ್ಚಿನ ಬೆಲೆಯನ್ನು ವಿಧಿಸಿದ್ದಾನೆ | ಗ್ರಾಹಕನು ಕೊಂಡು ಕೊಂಡ ವಸ್ತುಗಳಲ್ಲಿ ಒಂದು ಅಥವಾ ಹೆಚ್ಚು ದೋಷಗಳಿವೆ | ಅಂಗಡಿಯವನು ಒಂದು ನಿರ್ದಿಷ್ಟ ಉತ್ಪನ್ನವನ್ನು ನೀಡಲು ವಿಫಲವಾಗಿದ್ದಾನೆ | ನ್ಯಾಯಯುತವಲ್ಲದ ವ್ಯಾಪಾರಿ ಪದ್ಧತಿ ಅಥವಾ ನಿರ್ಬಂಧಿತ ವ್ಯಾಪಾರಿ ಪದ್ಧತಿಯನ್ನು ಅನುಸರಿಸಲಾಗಿದೆ | 3 |
| 109 | ಕೆಳಗಿನವುಗಳಲ್ಲಿ ಯಾವುದು ವಿಮಾ ಕ್ಷೇತ್ರದಲ್ಲಿ ದೂರು ನಿವಾರಣೆಯ ಮೇಲ್ವಿಚಾರಣೆಯ ಸಾಧನವಾಗಿದೆ? | ರಾಷ್ಟ್ರೀಯ ಆಯೋಗ | ಒಂಬಡ್ಸ್‌ಮನ್ | ಐಜಿಎಂಎಸ್ | ರಾಜ್ಯ ಆಯೋಗ | 3 |
| 110 | ಕೆಳಗಿನವುಗಳಲ್ಲಿ ಯಾವ ಗ್ರಾಹಕ ವ್ಯಾಜ್ಯಗಳ ಪರಿಹಾರ ಸಂಸ್ಥೆಗಳು ಸಾರ್ವಜನಿಕ ನ್ಯಾಯಾಲಯದ ಅಧಿಕಾರವನ್ನು ಹೊಂದಿರುತ್ತವೆ? | ಜಿಲ್ಲಾ ವೇದಿಕೆ | ರಾಜ್ಯ ಆಯೋಗ | ರಾಷ್ಟ್ರೀಯ ಆಯೋಗ | ಮೇಲಿನ ಎಲ್ಲವೂ | 4 |
| 111 | ಕೆಳಗಿನವುಗಳಲ್ಲಿ ಯಾವ ಗ್ರಾಹಕ ವ್ಯಾಜ್ಯಗಳ ಪರಿಹಾರ ಸಂಸ್ಥೆಗಳು ರಾಜ್ಯ ಆಯೋಗಕ್ಕಿಂತ ಹೆಚ್ಚು ಮೇಲ್ವಿಚಾರಣಾ ಕಾರ್ಯವ್ಯಾಪ್ತಿಯನ್ನು ಹೊಂದಿವೆ? | ಜಿಲ್ಲಾ ವೇದಿಕೆ | ರಾಷ್ಟ್ರೀಯ ಆಯೋಗ | ಒಂಬಡ್ಸ್‌ಮನ್ | ಮೇಲಿನ ಯಾವುದೂ ಅಲ್ಲ | 2 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 112 | ಕೆಳಗಿನವರಲ್ಲಿ ಯಾರು, ವಿಮಾಗಾರ ಮತ್ತು ವಿಮಾದಾರರ ಪರಸ್ಪರ ಒಪ್ಪಂದದ ಮೂಲಕ ವಿವಾದದ ನಿಯಮಗಳಿಗೊಳಗಾಗಿ ಮಧ್ಯವರ್ತಿ ಮತ್ತು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಾರೆ? ಸೂಕ್ತ ಆಯ್ಕೆಯನ್ನು ಆರಿಸಿ. | ವಿಮಾ ಪ್ರತಿನಿಧಿ | ಒಂಬಡ್ಸ್‌ಮನ್ | ವಿಮಾ ಸಂಸ್ಥೆ | ವಿಮಾ ಬ್ರೋಕರ್ | 2 |
| 113 | ಒಬ್ಬ ಗ್ರಾಹಕ ಜಿಲ್ಲಾ ವೇದಿಕೆಯ ಆದೇಶದಿಂದ ದುಃಖಿತರಾಗಿದ್ದಲ್ಲಿ ಅವನು / ಅವಳು ಇಂತಹ ಆದೇಶದ ವಿರುದ್ಧ ಮೇಲ್ಮನವಿಯನ್ನು ಎಲ್ಲಿ ಮಾಡಬಹುದು? | ರಾಜ್ಯ ಆಯೋಗ | ರಾಷ್ಟ್ರೀಯ ಆಯೋಗ | ಒಂಬಡ್ಸ್‌ಮನ್ | ಯಾವುದೇ ಮೇಲ್ಮನವಿ ಮಾಡಲಾಗುವುದಿಲ್ಲ | 1 |
| 114 | ಒಬ್ಬ ಗ್ರಾಹಕ ರಾಜ್ಯ ಆಯೋಗವು ನೀಡಿದ ಆದೇಶದಿಂದ ದುಃಖಿತರಾಗಿದ್ದಲ್ಲಿ ಅವನು/ಅವಳು ಇಂತಹ ಆದೇಶದ ವಿರುದ್ಧ ಮೇಲ್ಮನವಿಯನ್ನು ಎಲ್ಲಿ ಮಾಡಬಹುದು? | ಜಿಲ್ಲಾ ವೇದಿಕೆ | ರಾಷ್ಟ್ರೀಯ ಆಯೋಗ | ಒಂಬಡ್ಸ್‌ಮನ್ | ಯಾವುದೇ ಮೇಲ್ಮನವಿ ಮಾಡಲಾಗುವುದಿಲ್ಲ | 2 |
| 115 | ಕೆಳಗಿನ ಯಾವ ಕಾಯಿದೆಯು ಭಾರತದಲ್ಲಿನ ಗ್ರಾಹಕರ ವಿವಾದಗಳನ್ನು ಇತ್ಯರ್ಥಗೊಳಿಸಲು ಗ್ರಾಹಕ ಪರಿಷತ್ತುಗಳ ಮತ್ತು ಇತರ ಪ್ರಾಧಿಕಾರಗಳ ಸ್ಥಾಪನೆಗೆ ಅವಕಾಶ ಮಾಡುತ್ತದೆ? | ವಿಮಾ ಕಾಯಿದೆ, 1938 | ಐಆರ್‌ಡಿಎ ಕಾಯಿದೆ, 1999 | ಬ್ಯಾಕಿಂಗ್ ರೆಗ್ಯೂಲೇಶನ್ ಕಾಯಿದೆ, 1949 | ಗ್ರಾಹಕ ಸಂರಕ್ಷಣೆ (ತಿದ್ದುಪಡಿ) ಕಾಯಿದೆ, 2002 | 4 |
| 116 | ಕೆಳಗಿನವುಗಳಲ್ಲಿ ಯಾವುದು ರಾಜ್ಯ ಆಯೋಗಕ್ಕಿಂತ ಹೆಚ್ಚು ಮೇಲ್ವಿಚಾರಣಾ ಕಾರ್ಯವ್ಯಾಪ್ತಿಯನ್ನು ಹೊಂದಿವೆ? | ಜಿಲ್ಲಾ ವೇದಿಕೆ | ರಾಷ್ಟ್ರೀಯ ಆಯೋಗ | ಒಂಬಡ್ಸ್‌ಮನ್ | ಮೇಲಿನ ಯಾವುದೂ ಅಲ್ಲ | 2 |
| 117 | ದೂರು ಸಂದರ್ಭದಲ್ಲಿ ಒಂಬಡ್ಸ್‌ಮನ್ ತೀರ್ಪು ನೀಡಬಹುದಾದ ಗರಿಷ್ಠ ಮೊತ್ತ ಎಷ್ಟು? | 10 ಲಕ್ಷ ರೂಪಾಯಿವರೆಗೆ | 20 ಲಕ್ಷ ರೂಪಾಯಿವರೆಗೆ | 50 ಲಕ್ಷ ರೂಪಾಯಿವರೆಗೆ | 100 ಲಕ್ಷ ರೂಪಾಯಿವರೆಗೆ | 2 |
| 118 | ಕೆಳಗಿನ ಯಾವ ಹೇಳಿಕೆಯು ಗ್ರಾಹಕ ನ್ಯಾಯಾಲಯಕ್ಕೆ ದೂರು ಸಲ್ಲಿಸುವ ಪ್ರಕ್ರಿಯೆ ಸಂಬಂಧಿಸಿದಂತೆ ತಪ್ಪಾಗಿದೆ? | ದೂರುದಾರನೇ ಸ್ವತಃ ರಾಜ್ಯ ಅಥವಾ ರಾಷ್ಟ್ರೀಯ ಆಯೋಗಕ್ಕೆ ದೂರು ನೀಡಬೇಕು | ರಾಜ್ಯ ಅಥವಾ ರಾಷ್ಟ್ರೀಯ ಆಯೋಗದಲ್ಲಿ ದೂರನ್ನು ದಾಖಲಿಸಲು ಯಾವುದೇ ಶುಲ್ಕ ಇರುವುದಿಲ್ಲ | ದೂರನ್ನು ಖುದ್ದಾಗಿ ಅಥವಾ ಅಂಚೆಯ ಮೂಲಕ ಕೂಡ ಸಲ್ಲಿಸಬಹುದು | ದೂರನ್ನು ದಾಖಲಿಸಲು ಯಾವುದೇ ವಕೀಲರ ಅಗತ್ಯವಿರುವುದಿಲ್ಲ | 1 |
| 119 | ಕೆಳಗಿನವರಲ್ಲಿ ಯಾರನ್ನು ಗ್ರಾಹಕ ಸಂರಕ್ಷಣಾ (ತಿದ್ದುಪಡಿ) ಕಾಯಿದೆ, 2002 ರ ಪ್ರಕಾರ 'ಗ್ರಾಹಕ' ಶಬ್ದದ ವ್ಯಾಖ್ಯೆಯಲ್ಲಿ ಸೇರಿಸಲಾಗಿಲ್ಲ? | ಪರಿಗಣನೆಗಾಗಿ ಯಾವುದೇ ವ್ಯಕ್ತಿಯು ಏನಾದರು ವಸ್ತುಗಳನ್ನು ಖರೀದಿಸಿದರೆ ಮತ್ತು ಅಂತಹ ವಸ್ತುಗಳನ್ನು ಬಳಸುವ ಯಾವುದೇ ಬಳಕೆದಾರ | ಯಾವುದೇ ವ್ಯಕ್ತಿಯು ಪರಿಗಣನೆಗಾಗಿ ಬಾಡಿಗೆಗೆ ಅಥವಾ ಯಾವುದೆ ಸೇವೆಯನ್ನು ಪಡೆದುಕೊಂಡಲ್ಲಿ | ಯಾವುದೇ ವ್ಯಕ್ತಿಯು ಯಾವುದೇ ಸೇವೆಗಳನ್ನು ಪಡೆದುಕೊಂಡಲ್ಲಿ ಮತ್ತು ಆ ಸೇವೆಯಿಂದ ಆತನಿಗೆ ಪ್ರಯೋಜನ ಉಂಟಾದರೆ | ಪುನರ್ ಮಾರಾಟ ಮಾಡಲು ಅಥವಾ ಯಾವುದೇ ವಾಣಿಜ್ಯ ಕಾರಣಕ್ಕಾಗಿ ವಸ್ತುಗಳನ್ನು ಪಡೆದುಕೊಂಡಿರುವ ವ್ಯಕ್ತಿ | 4 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 120 | ಕೆಳಗಿನ ಶಿಷ್ಟಾಚಾರಗಳಲ್ಲಿ ಯಾವುದು ಓಂಬುಡ್ಸ್ ಮನ್ ಅನುಸರಿಸಬೇಕಾದ ಶಿಫಾರಸುಗಳು ಸಂಬಂಧಿಸಿದಂತೆ ತಪ್ಪಾಗಿದೆ? | ಶಿಫಾರಸ್ಸನ್ನು ದೂರಿನ ಸ್ವೀಕೃತಿಯಾದಂದಿನಿಂದ 6 ತಿಂಗಳಿನ ಒಳಗೆ ಮಾಡಬೇಕು | ನಕಲುಪ್ರತಿಗಳನ್ನು ದೂರು ನೀಡಿದವರಿಗೆ ಮತ್ತು ವಿಮಾ ಕಂಪನಿ ಎರಡಕ್ಕೂ ಕಳುಹಿಸಬೇಕು | ಶಿಫಾರಸ್ಸನ್ನು ಸ್ವೀಕರಿಸಿದ 15 ದಿನಗಳ ಒಳಗೆ ದೂರುದಾರರು ಶಿಫಾರಸ್ಸುಗಳನ್ನು ಸಮ್ಮತಿಸಿದ್ದನ್ನು ಬರಹದ ಮೂಲಕ ಸೂಚಿಸಬೇಕು | ವಿಮೆ ಪಡೆದವರು ವಿಮಾದಾರನಿಗೆ ಒಪ್ಪಿಗೆಯ ಪತ್ರವನ್ನು ಕಳುಹಿಸಬೇಕು ಮತ್ತು ಆತ ಬರಹ ಮೂಲಕ ಖಚಿತಪಡಿಸಿರುವುದನ್ನು ಅಂತಹ ಒಪ್ಪಿಗೆ ಪತ್ರ ಪಡೆದ 15 ದಿನಗಳ ಒಳಗೆ ಸ್ವೀಕರಿಸಬೇಕು | 1 |
| 121 | ಒಬ್ಬ ಪಾಲಿಸಿದಾರನು/ಳು ರಾಷ್ಟ್ರೀಯ ಆಯೋಗಕ್ಕೆ ದೂರು ಸಲ್ಲಿಸ ಬಯಸಿದಲ್ಲಿ ಅವರು ಕೊಡಬೇಕಾದ ಶುಲ್ಕದ ಪ್ರಮಾಣವೆಷ್ಟು? | ರೂ. 100 | ಕ್ಲೈಮ್ ಮೊತ್ತದ 2.5% ಅಥವಾ ರೂ. 500 ಇದರಲ್ಲಿ ಕಡಿಮೆ ಇರುವುದು | ಕ್ಲೈಮ್ ಮೊತ್ತದ 1% | ರಾಷ್ಟ್ರೀಯ ಆಯೋಗದಲ್ಲಿ ಗ್ರಾಹಕರ ದೂರಿನ ಅರ್ಜಿ ತುಂಬಲು ಯಾವುದೇ ಶುಲ್ಕವನ್ನು ಭರಿಸಬೇಕಾಗಿಲ್ಲ | 4 |
| 122 | ಕೆಳಗಿನವುಗಳಲ್ಲಿ ಯಾವುದು ವಿಮಾ ದೂರು ಮಾಹಿತಿಯ ಒಂದು ಕೇಂದ್ರೀಯ ಭಂಡಾರವಾಗಿದೆ? | ರಾಷ್ಟ್ರೀಯ ಆಯೋಗ | ಒಂಬಡ್ಸ್‌ಮನ್ | ಐಜಿಎಂಎಸ್ | ರಾಜ್ಯ ಆಯೋಗ | 3 |
| 123 | ಕೆಳಗಿನ ಯಾವ ಗ್ರಾಹಕ ವ್ಯಾಜ್ಯಗಳ ಪರಿಹಾರ ಸಂಸ್ಥೆಗಳು ಜಿಲ್ಲಾ ವೇದಿಕೆಯಿಂದ ಬಂದ ಮೇಲ್ಮನವಿಗಳನ್ನು ಪರೀಕ್ಷಿಸುತ್ತದೆ? | ರಾಜ್ಯ ಆಯೋಗ | ರಾಷ್ಟ್ರೀಯ ಆಯೋಗ | ಐಆರ್‌ಡಿಎ | ಯಾವುದೇ ಮೇಲ್ಮನವಿ ಮಾಡಲಾಗುವುದಿಲ್ಲ | 1 |
| 124 | ಕೆಳಗಿನ ಯಾವ 'ಗ್ರಾಹಕ ವ್ಯಾಜ್ಯಗಳ ಪರಿಹಾರ ಸಂಸ್ಥೆ'ಗಳು ರಾಜ್ಯ ಆಯೋಗದ ಆದೇಶದ ವಿರುದ್ಧ ಮೇಲ್ಮನವಿಗಳನ್ನು ಪರೀಕ್ಷಿಸುತ್ತದೆ? | ಜಿಲ್ಲಾ ವೇದಿಕೆ | ರಾಷ್ಟ್ರೀಯ ಆಯೋಗ | ಐಆರ್‌ಡಿಎಐ | ಯಾವುದೇ ಮೇಲ್ಮನವಿ ಮಾಡಲಾಗುವುದಿಲ್ಲ | 2 |
| 125 | ಒಬ್ಬ ಪಾಲಿಸಿದಾರನು/ಳು ದೂರಿನ ವಿರುದ್ಧ ರೂ. 20 ಲಕ್ಷಗಳ ಪರಿಹಾರ ಪಡೆಯಲು ಬಯಸಿದಲ್ಲಿ ಅವನು / ಅವಳು ಎಲ್ಲಿ ದೂರು ಸಲ್ಲಿಸಬಹುದು? ಸೂಕ್ತ ಆಯ್ಕೆ ಮಾಡಿ. | ಜಿಲ್ಲಾ ವೇದಿಕೆ | ರಾಜ್ಯ ಆಯೋಗ | ರಾಷ್ಟ್ರೀಯ ಆಯೋಗ | ಐಆರ್‌ಡಿಎಐ | 1 |
| 126 | ಕೆಳಗಿನವುಗಳಲ್ಲಿ ಯಾವುದು ಸೇವೆ ಗುಣಮಟ್ಟವನ್ನು ನೇರವಾಗಿ ಸೂಚಿಸುವುದಿಲ್ಲ? | ವಿಶ್ವಾಸಾರ್ಹತೆ | ಆತ್ಮಾರೋಪ | ಭರವಸೆ ಕೊಡುವಿಕೆ | ಮಾರಾಟದ ಮಾಹಿತಿ | 4 |
| 127 | ಕೆಳಗಿನ ಯಾವುದು ಗ್ರಾಹಕರ ಜೀವ ಮೌಲ್ಯದ ಕಡೆಗೆ ಕೊಡುಗೆ ನೀಡುವುದಿಲ್ಲ | ಐತಿಹಾಸಿಕ | ವರ್ತಮಾನ | ಸಂಭವನೀಯ | ಊಹನೆಗಳು | 4 |
| 128 | IGMS ಸರಿಯಾದ ವಿಸ್ತರಿಸಿದ ರೂಪ ಆಯ್ಕೆ ಮಾಡಿರಿ | ಇಂಡೋ ಜರ್ಮನ್ ಮ್ಯಾನೇಜ್ಮೆಂಟ್ ಸ್ಕೂಲ್ | ಸಂಯೋಜಿತ ಸರ್ಕಾರ ನಿರ್ವಹಣಾ ವ್ಯವಸ್ಥೆ | ಇಂಡಿಯನ್ ಜೀನೋಮ್ ಮ್ಯಾಪಿಂಗ್ ಸ್ಕೀಮ್ | ಸಂಯೋಜಿತ ದೂರು ನಿರ್ವಹಣಾ ವ್ಯವಸ್ಥೆ (ಇಂಟೆಗ್ರೇಟೆಡ್ ಗ್ರೀವೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್) | 4 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 129 | ಪರಿಣಾಮಕಾರಿಯಾಗಿ, ನಿಯಮಗಳು ಮತ್ತು ಮಾರ್ಗದರ್ಶನಗಳನ್ನು ಹೊಂದಿಸಿರುವ ನಿಯಮ ಮತ್ತು ಮಾರ್ಗದರ್ಶನಗಳ ಪ್ರಕಾರ, ಪಾಲಿಸಿ ಹೊಂದಿರುವವರ ದೂರುಗಳು ಮತ್ತು ಅಸಮಾಧಾನಗಳನ್ನು ನೋಡುವುದು | ದೂರು ನಿರ್ವಹಾಣ ವಿಧಾನಗಳು | ದುಃಖ ನಿರ್ವಹಣಾ ವಿಧಾನ | ಅಪಾಯದ ದೂರು ನೀಡುವ ಕಾರ್ಯವಿಧಾನ | ಹಾನಿ ದೂರುಗಳ ಕಾರ್ಯವಿಧಾನ | 2 |
| 130 | ಸಾರ್ವಜನಿಕ ಪರಿಹಾರದಲ್ಲಿ ಕುಂದುಕೊರತೆ ನಿಯಮಗಳು, 1998 ಎಂಬುದು ______ ರೂಪಿಸಿದ ನಿಯಮಗಳು | ಐಆರ್‌ಡಿಎಐ | ಎನ್ ಬಿ ಎಫ್ ಸಿ | ಸೆಬಿ | ಕೇಂದ್ರ ಸರಕಾರ | 4 |
| 131 | ನಿಯೋಜನೆ ಅಥವಾ ವರ್ಗಾವಣೆಯ ಕಾರಣವನ್ನು ಬರವಣಿಗೆಯ ಮೂಲಕ ಪಾಲಿಸಿದಾರನ ಗಮನಕ್ಕೆ _____ ಇವರ ನಿರ್ಧಾರವನ್ನು ಸಂಹವನ ಮಾಡಬೇಕು | ದೂರು ನಿವಾರಣಾ ಪ್ರಾಧಿಕಾರ | ಗ್ರಾಹಕ ಕ್ಲೇಶ ನಿವಾರಣಾ ಪ್ರಾಧಿಕಾರ | ಮಾರಾಟಗಾರರ ಕ್ಲೇಶ ನಿವಾರಣಾ ಅಧಿಕಾರ | ಆಡಳಿತಾತ್ಮಕ ಕ್ಲೇಶ ನಿವಾರಣಾ ಅಧಿಕಾರ | 1 |
| 132 | ವಿಮೆದಾರ ______ ಅಡಿಯಲ್ಲಿ ಲೋಕಾಯುಕ್ತ ಭೇಟಿ ಮೂಲಕ ವಿವಾದ ಪರಿಹರಿಸಬಹುದು | ದೂರು ನಿರ್ವಹಣೆಯ ಕಾರ್ಯವಿಧಾನ | ದುಃಖ ನಿವಾರಣಾ ವಿಧಾನ | ಅಪಾಯದ ದೂರು ನೀಡುವ ಕಾರ್ಯವಿಧಾನ | ಸಾರ್ವಜನಿಕ ಕುಂದುಕೊರತೆ ನಿವಾರಣೆಯ ನಿಯಮಗಳು | 4 |
| 133 | ಗ್ರಾಹಕ ರಕ್ಷಣೆ ಕಾಯ್ದೆಯ ಕೆಳಗಿನ ಮುಖ್ಯ ಉದ್ದೇಶ ಯಾವುದು?<br>i. ಪಾಲಿಸಿದಾರರ ಹಿತಾಸಕ್ತಿಯನ್ನು ರಕ್ಷಿಸುವದು<br>ii. ಹೂಡಿಕೆದಾರರ ಹಿತಾಸಕ್ತಿ ರಕ್ಷಿಸುವದು<br>iii. ಗ್ರಾಹಕ ಕುಂದುಕೊರತೆಗಳಿಗೆ, ಸರಳ, ವೇಗದ ಮತ್ತು ಅಗ್ಗದ ನಿವಾರಣೆ ಒದಗಿಸುವುದು | ಕೇವಲ ಹೇಳಿಕೆ (i) ಮಾತ್ರ ಸರಿಯಾಗಿದೆ | ಹೇಳಿಕೆ (i) ಮತ್ತು (ii) ಸರಿಯಾಗಿವೆ | ಕೇವಲ ಹೇಳಿಕೆ (iii) ಮಾತ್ರ ಸರಿಯಾಗಿದೆ | ಹೇಳಿಕೆ (i) ಮತ್ತು (iii) ಸರಿಯಾಗಿವೆ | 3 |
| 134 | "ಸಾರ್ವಜನಿಕ ಕುಂದುಕೊರತೆ ನಿವಾರಣಾ ನಿಯಮಗಳು, 1998", ಜಾರಿಗೆ ಬಂದಿರುವುದು ______ರಲ್ಲಿ | 12–ಅಕ್ಟೋಬರ್–1991 | 11–ನವೆಂಬರ್–1998 | 13–ಡಿಸೆಂಬರ್–1997 | 14–ಸೆಪ್ಟಂಬರ್–1983 | 2 |
| 135 | ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ನಿಯಮಗಳ ಗುರಿ ಕೆಳಗಿನವುಗಳಲ್ಲಿ ಯಾವುದು?<br>i. ವಿವಾದಗಳ ಇತ್ಯರ್ಥಕ್ಕೆ ಸಂಬಂಧಿಸಿದ ದೂರುಗಳನ್ನು ನಿವಾರಿಸುವ ಗುರಿ<br>ii. ಗ್ರಾಹಕರ ಹಿತಾಸಕ್ತಿಯ ರಕ್ಷಣೆ<br>iii. ಗ್ರಾಹಕರಿಗೆ ಅಸಮಾಧಾನಗಳನ್ನು ಒದಗಿಸುವುದು | ಕೇವಲ ಹೇಳಿಕೆ (i) ಮಾತ್ರ ಸರಿಯಾಗಿದೆ | ಹೇಳಿಕೆ (i) ಮತ್ತು (ii) ಸರಿಯಾಗಿವೆ | ಕೇವಲ ಹೇಳಿಕೆ (iii) ಮಾತ್ರ ಸರಿಯಾಗಿದೆ | ಹೇಳಿಕೆ (i) ಮತ್ತು (iii) ಸರಿಯಾಗಿವೆ | 1 |
| 136 | ಒಂಬಡ್ಸ್‌ಮನ್ ಕಾರ್ಯ ಕೆಳಗಿನವುಗಳಲ್ಲಿ ಯಾವುದು?<br>i. ಗ್ರಾಹಕರ ಅಸಮಾಧಾನಗಳ ನಿವಾರಣೆ<br>ii. ಗ್ರಾಹಕರ ಹಿತಾಸಕ್ತಿಯ ರಕ್ಷಣೆ<br>iii. ಪಾಲಿಸಿದಾರ ಅಸಮಾಧಾನಗಳ ನಿವಾರಣೆ | ಕೇವಲ ಹೇಳಿಕೆ (i) ಮಾತ್ರ ಸರಿಯಾಗಿದೆ | ಹೇಳಿಕೆ (i) ಮತ್ತು (ii) ಸರಿಯಾಗಿವೆ | ಕೇವಲ ಹೇಳಿಕೆ (iii) ಮಾತ್ರ ಸರಿಯಾಗಿದೆ | ಹೇಳಿಕೆ (i) ಮತ್ತು (iii) ಸರಿಯಾಗಿವೆ | 3 |

| S. No. | Question Body | Alternative-1 | Alternative-2 | Alternative-3 | Alternative-4 | Correct Alternative |
|---|---|---|---|---|---|---|
| 137 | ಕೆಳಗಿನ ಯಾವುದು ಕುಂದುಕೊರತೆ ನಿವಾರಣಾ ಅಧಿಕಾರಿಗಳು (GRA) ವ್ಯವಹರಿಸಲು ರಚಿಸಲಾಗುವುದು ಎಂದು ಆಯೋಗದಿಂದ ಶಿಫಾರಸು ಮಾಡಲಾಗಿದೆ?<br>i. ವಿಮೆದಾರ ಮತ್ತು ವಿಮೆಗಾರರ ನಡುವಿನ ತಕರಾರುಗಳು<br>ii. ವಿಮೆದಾರ ಮತ್ತು ಮಧ್ಯವರ್ತಿಗಳ ನಡುವಿನ ತಕರಾರುಗಳು<br>iii. ವಿಮೆಗಾರರ ಮತ್ತು ಮಧ್ಯವರ್ತಿಗಳ ನಡುವಿನ ತಕರಾರುಗಳು<br>iv. ವಿಮೆದಾರ ಮಧ್ಯವರ್ತಿಗಳ ಮತ್ತು ವಿಮೆಗಾರರ ನಡುವಿನ ತಕರಾರುಗಳು | ಹೇಳಿಕೆ (i) ಮತ್ತು (ii) ಸರಿಯಾಗಿವೆ | ಹೇಳಿಕೆ (i) ಮತ್ತು (iii) ಸರಿಯಾಗಿವೆ | ಹೇಳಿಕೆ (ii) ಮತ್ತು (iii) ಸರಿಯಾಗಿವೆ | ಕೇವಲ ಹೇಳಿಕೆ (iv) ಮಾತ್ರ ಸರಿಯಾಗಿದೆ | 4 |
| 138 | ಯಾರು ವಿಮೆದಾರ ಮತ್ತು ವಿಮೆಗಾರರ ನಡುವಿನ ವಿವಾದಗಳಲ್ಲಿ ವ್ಯವಹರಿಸುವರು? | ಗ್ರಾಹಕ ಗುಂಪು | ದೂರು ನಿವಾರಣಾ ಅಧಿಕಾರಿಗಳು (ಜಿಆರ್ಎ) | ಗ್ರಾಹಕ ಪ್ರಾಧಿಕಾರ | ಗ್ರಾಹಕ ಆಯೋಗ | 2 |
| 139 | ಯಾರು ವಿಮೆಗಾರರು ಮತ್ತು ಮಧ್ಯವರ್ತಿಗಳ ನಡುವಿನ ವಿವಾದಗಳಲ್ಲಿ ವ್ಯವಹರಿಸುವರು? | ಗ್ರಾಹಕ ಪ್ರಾಧಿಕಾರ | ಗ್ರಾಹಕ ಗುಂಪು | ಗ್ರಾಹಕ ಆಯೋಗ | ದೂರು ನಿವಾರಣಾ ಅಧಿಕಾರಿಗಳು (ಜಿಆರ್ಎ) | 4 |
| 140 | _______ ರವರು ತೃತೀಯ ವಾಹನ ವಿಮೆ ಮತ್ತು ನೌಕಾ ವಿಮೆ ಸಂಬಂಧಿಸಿದ ವ್ಯಾಜ್ಯದ ವ್ಯಾಪ್ತಿಯನ್ನು ಹೊಂದಿರುವುದಿಲ್ಲ? | ಗ್ರಾಹಕ ಆಯೋಗ | ಗ್ರಾಹಾಕ ಪ್ರಾಧಿಕಾರ | ದೂರು ನಿವಾರಣಾ ಅಧಿಕಾರಿಗಳು (ಜಿಆರ್ಎ) | ಗ್ರಾಹಕ ಗುಂಪು | 3 |
